ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ

NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 04 RNI Number : KNKAN/25/A2770 04-01-2026 Sunday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :04 ರಾಯಚೂರು 04-01-2026 ರವಿವಾರ ಪುಟ 04 ಬೆಲೆ ರೂ.2/- ಮೊ:8660146563

ಕೇಂದ್ರ ಕಾರಾಗೃಹಕ್ಕೆ ಡಿಜಿಪಿ ಅಲೋಕ ಕುಮಾರ ಭೇಟಿ, ತಪಾಸಣೆ



ಕಲಬುರಗಿ,ಜ.3-

ನಗರ ಹೊರವಲಯದ ಕೇಂದ್ರ ಕಾರಾಗೃಹದ ಒಳಗಡೆ ಕೈದಿಗಳು ಇಸ್ಪೀಟ್ ಆಡುವುದು, ಮದ್ಯಪಾನ ಹಾಗೂ ಸಿಗರೇಟ್ ಸೇವಿಸುತ್ತ ಐಷಾರಾಮಿ ಜೀವನ ನಡೆಸುತ್ತಿರುವ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ಹಿನ್ನೆಲೆಯಲ್ಲಿ ಕಾರಾಗೃಹ ಇಲಾಖೆಯ ಡಿಜಿಪಿ ಅಲೋಕ್ ಕುಮಾರ್ ಅವರು ಇಂದು ಕಾರಾಗೃಹಕ್ಕೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ.

ನಗರದ ಹೊರವಲಯದಲ್ಲಿರುವ ಕೇಂದ್ರ ಕಾರಾಗೃಹಕ್ಕೆ ಭೇಟಿ ನೀಡಿದ ಡಿಜಿಪಿ, ಜೈಲಿನ ಪ್ರತಿಯೊಂದು ಬ್ಯಾರಕ್‌ಗಳನ್ನು ಕೂಲಂಕುಷವಾಗಿ ತಪಾಸಣೆ ನಡೆಸಲಿದ್ದಾರೆ ಎಂದು ತಿಳಿದುಬಂದಿದೆ. ಜೈಲಿನಲ್ಲಿ ಅಕ್ರಮ ವಸ್ತುಗಳ ಸರಬರಾಜು ಹೇಗೆ ನಡೆಯುತ್ತಿದೆ ? ಹಾಗೂ ಕೈದಿಗಳ ಐಷಾರಾಮಿ ಜೀವನ ನಡೆಸಲು ಹೇಗೆ ಸಾಧ್ಯ ಎಂಬ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆಯಲಿದ್ದಾರೆ.

ವಿಡಿಯೋ ವೈರಲ್

ಇತ್ತೀಚೆಗಷ್ಟೇ ಕಲಬುರಗಿ ಜೈಲಿನ ಒಳಗಡೆ ಕೈದಿಗಳು ಇಸ್ಪೀಟ್ ಆಡುವುದು, ಮದ್ಯಪಾನ ಹಾಗೂ ಸಿಗರೇಟ್ ಸೇವಿಸುತ್ತ ಐಷಾರಾಮಿ ಜೀವನ ನಡೆಸುತ್ತಿರುವ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದವು. ಈ ಘಟನೆಯು ರಾಜ್ಯ ಕಾರಾಗೃಹ ಇಲಾಖೆಯಲ್ಲಿ

3ನೇ ಪುಟಕ್ಕೆ

ರಾಜ್ಯದಲ್ಲೇ ಹೊಸ ಇತಿಹಾಸ ಬರೆದ ಸಿಂಧನೂರು ಕ್ಷೇತ್ರದ ಶಾಸಕರು

ಶಾಲಾ-ಕಾಲೇಜು ವಿದ್ಯಾರ್ಥಿಗಳಿಗಾಗಿಯೇ 14 ವಿನೂತನ ಬಸ್‌ಗಳಿಗೆ ಸಿಎಂ ಸಮ್ಮುಖದಲ್ಲಿ ಚಾಲನೆ

ರಾಯಚೂರು ಜ.03-

ರಾಜ್ಯದಲ್ಲೇ ಸಿಂಧನೂರು ತಾಲೂಕಿನ ಶಾಸಕರಾದ ಹಂಪನಗೌಡ ಬಾದರ್ಲಿ ಅವರು ಹೊಸ ಇತಿಹಾಸ ನಿರ್ಮಿಸಿದ್ದಾರೆ.

ಶಾಸಕರ ವಿಶೇಷ ಪ್ರಯತ್ನದಿಂದಾಗಿ ಇನ್ಮುಂದೆ ಶಾಲಾ ಕಾಲೇಜುಗಳಿಗೆ ವಿದ್ಯಾರ್ಥಿಗಳು ಬಂದು ಹೋಗಲು ಅನುಕೂಲವಾಗುವಂತೆ ಸಿಂಧನೂರ ತಾಲೂಕಿನ ಪ್ರತಿ ಹಳ್ಳಿಹಳ್ಳಿಗಳ ರಸ್ತೆಗಳಿಗೆ ಹೊಸ 14 ಬಸ್ಸ ಗಳು ಇಳಿಯಲಿವೆ.

ರಾಯಚೂರು ಜಿಲ್ಲೆಯಲ್ಲಿಯೇ ಸಿಂಧನೂರ ತಾಲೂಕಿನಲ್ಲಿ ದಾಖಲೆಯ ಈ ಬಸ್ ಸೌಕರ್ಯಕ್ಕೆ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರ ಸಮ್ಮುಖದಲ್ಲಿ ಸಾರಿಗೆ ಸಚಿವರಾದ ರಾಮಲಿಂಗಾ ರೆಡ್ಡಿ ಅವರು ಜನವರಿ 3ರಂದು ಅಂಬಾಮಠದ ಆವರಣ ದಲ್ಲಿ ವಿದ್ಯುಕ್ತ ಚಾಲನೆ ನೀಡಿದರು.

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ 5 ಕೋಟಿ ರೂ ಅನುದಾನದಲ್ಲಿ ತಿಳಿ ಹಸಿರು ಬಳಿ ಮಿಶ್ರಿತ 10 ಬಸ್ಸ ಗಳಿಗೆ ಸಾಂಕೇತಿ ಕವಾಗಿ ಹಸಿರು ನಿಶಾನೆ ತೋರಿದರು.

ಬಸ್ ಗಳಿಗೆ ಅಲಂಕಾರ: ಉದ್ಘಾಟನೆ ಹಿನ್ನೆಲೆಯಲ್ಲಿ ಅಂಬಾಮಠದ ಅಂಗಳದಲ್ಲಿ ನಿಲುಗಡೆಯಾಗಿದ್ದ ಎಲ್ಲ ಬಸ್‌ಗಳಿಗೆ ಬಲೂನ್ ಕಟ್ಟಿ ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು.

ಈ ಸಂದರ್ಭದಲ್ಲಿ ಸಿಂಧನೂರ ಶಾಸಕರಾದ ಹಂಪನಗೌಡ ಬಾದರ್ಲಿ ಸೇರಿದಂತೆ, ಸಚಿವರಾದ ಡಾ.ಶರಣಪ್ರಕಾಶ ಪಾಟೀಲ, ಶಿವರಾಜ ತಂಗಡಗಿ, ಸತೀಶ ಜಾರಕಿಹೊಳಿ, ಸಂಸದರಾದ ರಾಜಶೇಖರ ಹಿಟ್ನಾಳ, ಶಾಸಕರಾದ ಬಸನಗೌಡ ದದ್ದಲ್, ಬಸನಗೌಡ ತುರವಿಹಾಳ, ಬಿಎಂ ನಾಗರಾಜ, ವಿಧಾನ ಪರಿಷತ್ ಶಾಸಕರಾದ ಎ ವಸಂತಕುಮಾರ, ಬಸನಗೌಡ ಬಾದರ್ಲಿ, ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಂ, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಎಸ್ಪಿ ಅರುಣಾಂಕ್ಷು ಗಿರಿ, ಕಲ್ಯಾಣ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಬಿ ಸುಶೀಲಾ, ಮುಖ್ಯ ತಾಂತ್ರಿಕ ಶಿಲ್ಪಿಗಳಾದ ಸಂತೋಷಕುಮಾರ, ವಿಭಾಗೀಯ ನಿಯಂತ್ರಾಧಿಕಾರಿ ಚಂದ್ರಶೇಖರ, ವಿಭಾಗೀಯ ತಾಂತ್ರಿಕ ಶಿಲ್ಪಿಗಳಾದ ನಾಗರಾಜ ವಾರದ ಹಾಗೂ ಇನ್ನಿತರರು ಇದ್ದರು.

★ ರೈತರಿಗೆ ಸಿಹಿ ಸುದ್ದಿ ನೀಡಿದ ಮುಖ್ಯಮಂತ್ರಿಗಳು ★ ಬಸ್ ಸೌಕರ್ಯ ಕಲ್ಪಿಸಿದ್ದಕ್ಕೆ ಶಾಸಕ ಬಾದರ್ಲಿ ಅವರಿಗೆ ಅಭಿನಂದನೆ

ಜೂನ್ ಒಳಗಡೆ ತಂಗಭದ್ರಾ ಡ್ಯಾಮಗೆ ಹೊಸ ಕ್ರಸ್ಟ್ ಗೇಟ್ ಅಳವಡಿಸುತ್ತೇವೆ: ಸಿಎಂ

ರಾಯಚೂರು,ಜ.03-

ಏನೇ ತೊಂದರೆಯಾದರೂ, ಎಷ್ಟೇ ಖರ್ಚಾದರು ಸಹ ತುಂಗಭದ್ರಾ ಡ್ಯಾಮಗೆ ಬರುವ ಜೂನ್ ಒಳಗಡೆ ಹೊಸ ಕ್ರಸ್ಟ್ ಗೇಟ್ ಅಳವಡಿಸಿ, ಮುಂದಿನ ಮುಂಗಾರು ಬೆಳೆಗೆ ನೀರು ಹರಿಸಿ ರೈತರಿಗೆ ನೀಡಿದ ಮಾತು ಉಳಿಸಿಕೊಳ್ಳುತ್ತೇವೆ ಎಂದು ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಹೇಳಿದರು.

ತಾಲೂಕಾಡಳಿತ, ತಾಲೂಕು ಪಂಚಾಯತ್ ಹಾಗೂ ಧಾರ್ಮಿಕ ದತ್ತಿ ಇಲಾಖೆಯ ಅಂಬಾದೇವಿ ವ್ಯವಸ್ಥಾಪನಾ ಸಮಿತಿಯ ಆಶ್ರಯದಲ್ಲಿ ಸಿಂಧನೂರ ತಾಲೂಕಿನ ಅಂಬಾಮಠದ ಆವರಣದಲ್ಲಿ ಜನವರಿ 3ರಂದು ನಡೆದ ಅಂಬಾದೇವಿ ಮಹಾರಥೋತ್ಸ ವ ಮತ್ತು ಜಂಬೂ ಸವಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದ ಮುಖ್ಯಮಂತ್ರಿಗಳು, 431 ಕೋಟಿ ರೂ ವೆಚ್ಚದಲ್ಲಿ ಪಾಪಯ್ಯ ಟನೇಲ್ ಕಾರ್ಯ ಮತ್ತು 33 ಗೇಟ್ ಅಳವಡಿಸುವ ಕಾರ್ಯ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಸಿಂಧನೂರ ಕ್ಷೇತ್ರದ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ ನೀಡಿದ ಅನುದಾನವನ್ನು ಶಾಸಕರಾದ ಹಂಪನಗೌಡ ಬಾದರ್ಲಿ ಅವರು ಸದ್ಬಳಕೆ ಮಾಡುತ್ತಿರುವುದು ಸಂತಷದ ಸಂಗತಿಯಾಗಿದೆ. ಸಿಂಧನೂರ ಕ್ಷೇತ್ರದ



ಕುಡಿಯುವ ನೀರಿನ ಕೆರೆಗಳ ನಿರ್ಮಾಣ ಅಭಿವೃದ್ಧಿಗೆ 13.42 ಕೋಟಿ ರೂ., ಸಾಲಗುಂದ ಏತ ನೀರಾವರಿ ಯೋಜನೆಗೆ 71 ಕೋಟಿ ರೂ., ಒಳಬಳ್ಳಾರಿ ಏತ ನೀರಾವರಿ ಯೋಜನೆಗೆ 43.10 ಕೋಟಿ ರೂ., ಮುಳ್ಳೂರ ಗ್ರಾಮದ ಹತ್ತಿರ ಬ್ರಿಜ್ ಕಂ ಬ್ಯಾರೇಜ್ ಯೋಜನೆಗೆ 29 ಕೋಟಿ ರೂ ವೆಚ್ಚ ಮಾಡಿ ಈ ಭಾಗದ ಅನ್ನದಾತರಿಗೆ ಅನುಕೂಲ ಕಲ್ಪಿಸುತ್ತಿದ್ದೇವೆ ಎಂದು ತಿಳಿಸಿದರು.

42 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರು ಹರಿಸುವ ಪ್ರಯತ್ನದಲ್ಲಿ ಈಗಾಗಲೇ 30 ಲಕ್ಷ ಪ್ರದೇಶಕ್ಕೆ ನೀರು ಕೊಟ್ಟಿದ್ದೇವೆ. ಉಳಿದ 12 ಲಕ್ಷ ಹೆಕ್ಟೇರ ಪ್ರದೇಶಕ್ಕೆ ಸಹ ನೀರು ಹರಿಸುವ ಕಾರ್ಯ ನಡೆಯುತ್ತಿದೆ ಎಂದರು.

ರಾಜ್ಯ ಸರ್ಕಾರದ ಖಜಾನೆಯಲ್ಲಿ ಹಣ ಇಲ್ಲ ಎನ್ನುವುದು ಅಪ್ಪಟ ಸುಳ್ಳು. ನಾವು ಹಿಂದೆ ಬಿದ್ದಿಲ್ಲ. ಅಭಿವೃದ್ಧಿ ಕಾರ್ಯಗಳು ಹಾಗೂ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಕಾರ್ಯ ಎರಡೂ ನಡೆಯುತ್ತಿವೆ.

ಅನ್ನಭಾಗ್ಯ, ಗೃಹಲಕ್ಷ್ಮಿ, ಗೃಹಜ್ಯೋತಿ, ಶಕ್ತಿ, ಯುವನಿಧಿ ಪಂಚ ಗ್ಯಾರಂಟಿ ಯೋಜನೆಗಳಿಗೆ ಇದುವರೆಗೆ ರಾಜ್ಯ ಸರ್ಕಾರವು 1,12,000 ಕೋಟಿ ರೂ ಖರ್ಚು ಮಾಡಿದ್ದೇವೆ. ಪ್ರಸಕ್ತ 2026ನೇ ಸಾಲಿನಲ್ಲೂ ಸಹ ಮತ್ತೆ 52 ಸಾವಿರ ಕೋಟಿ ರೂ ಖರ್ಚು ಮಾಡುತ್ತಿದ್ದೇವೆ.

ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿದ ಬಳಿಕ

ತಲಾ ಆದಾಯದಲ್ಲಿ ಕರ್ನಾಟಕ ರಾಜ್ಯವು ಇಡಿ ದೇಶದಲ್ಲೇ ನಂಬರ್ 1 ಸ್ಥಾನದಲ್ಲಿದೆ.

ನಾವು ನುಡಿದಂತೆ ನಡೆಯುತ್ತೇವೆ. ಹೇಳಿದಂತೆ ಕೆಲಸ ಮಾಡತ್ತೇವೆ. ರಾಯಚೂರು ಜಿಲ್ಲೆಯಲ್ಲಿ

ಕೊನೆಯ ಭಾಗದ ರೈತರಿಗೆ ನೀರು ಕೊಡಲು ನಾವು ಬದ್ಧರಾಗಿದ್ದೇವೆ ಎಂದು ತಿಳಿಸಿದರು.

ರಾಜಸ್ಥಾನ ರಾಜ್ಯ ಬಿಟ್ಟರೆ ಕರ್ನಾಟಕ ರಾಜ್ಯವು ಹೆಚ್ಚು ಒಣಭೂಮಿ ಇರುವ ಎರಡನೇ ರಾಜ್ಯವಾಗಿದೆ. ಇದು ನಮ್ಮ ಗಮನಕ್ಕಿದೆ. ಈ ಕಾರಣದಿಂದಾಗಿ ಸಿಂಧನೂರ, ರಾಯಚೂರು ಸೇರಿದಂತೆ ಎಲ್ಲಾ ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ಒತ್ತು ನೀಡಿ ನೀರಾವರಿ ಪ್ರದೇಶದ ವಿಸ್ತೀರ್ಣಕ್ಕೆ, ಹಸೀರಿಕರಣಕ್ಕೆ ಒತ್ತು ಕೊಡುವ ಉದ್ದೇಶ ಹೊಂದಿದ್ದೇವೆ ಹೊಂದಿದ್ದೇವೆ ಎಂದರು.

ಕೃಷ್ಣ ಮೇಲ್ದಂಡೆ ಮೂರನೇ ಹಂತದ ಯೋಜನೆಯ ಅನುಷ್ಠಾನಕ್ಕೆ ಕೇಂದ್ರ ಸರ್ಕಾರವು ಇದುವರೆಗೆ ಗೆಜೆಟ್ ನೋಟಿಫಿಕೇಶನ್ ಮಾಡುತ್ತಿಲ್ಲ. 172 ಟಿಎಂಸಿ ನೀರು ಬಳಸಿಕೊಳ್ಳಲು ಯಾವುದೇ ಅಭ್ಯಂತರ ಇಲ್ಲ ಎಂಬುದಾಗಿ

2013ರಲ್ಲಿಯೇ ನ್ಯಾಯ ನಮ್ಮ ಪರವಾಗಿದೆ ಎಂದು ತಿಳಿಸಿದರು.

ಬಾಕಿ ಅನುದಾನ ಬಿಡುಗಡೆ: ಶ್ರೀ ಸೋಮಲಾಪುರದ ಅಂಬಾಮಠದ ದೇವಸ್ಥಾನಕ್ಕೆ ನಿಗದಿಪಡಿಸಿದ 6.30 ಕೋಟಿ ರೂ ಪೈಕಿ ಇದುವರೆಗೆ 2 ಕೋಟಿ ರೂ ವೆಚ್ಚ ಮಾಡಲಾಗಿದೆ. ಬಾಕಿ ಅನುದಾನವನ್ನು ಸಹ ಬಿಡುಗಡೆ ಮಾಡಿ ಅಂಬಾಮಠದ ಸಮಗ್ರ ಅಭಿವೃದ್ಧಿಗೆ ನಾವು ಬದ್ದರಾಗಿದ್ದೇವೆ ಎಂದು ತಿಳಿಸಿದರು.

ಮಹಾತ್ಮ ಗಾಂಧೀಜಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸ್ವರೂಪವನ್ನು ಕೇಂದ್ರ ಸರ್ಕಾರವು ಸಂಪೂರ್ಣ ಬದಲಿಸಿ, ಜನ

3ನೇ ಪುಟಕ್ಕೆ

ಅಮರಶಿಲ್ಪಿ ಜಕಣಚಾರಿ ಅವರು ಭಾರತೀಯ ವಾಸ್ತುಶಿಲ್ಪವನ್ನು ವಿಶ್ವಕ್ಕೆ ಪರಿಚಯಿಸಿದ್ದಾರೆ: ತಹಶೀಲ್ದಾರ ಸುರೇಶ ವರ್ಮಾ



ರಾಯಚೂರು,ಜ.03-

ಅಮರಶಿಲ್ಪಿ ಜಕಣಾಚಾರಿ ಅವರು ಭಾರತೀಯ ವಾಸ್ತುಶಿಲ್ಪ ಕಲೆಯ ವಿಶೇಷತೆಯನ್ನು ಜಗತ್ತಿಗೆ ಪರಿಚಯಿಸುವ ಮೂಲಕ ಭಾರತದ ಕಡೆ ಜಾಗತಿಕ ಗಮನ ಸೆಳೆಯುವಲ್ಲಿ ಮಹತ್ವದ ಪಾತ್ರವಹಿಸಿದ್ದಾರೆ ಎಂದು ತಹಶೀಲ್ದಾರ್ ಸುರೇಶ್ ವರ್ಮಾ ಹೇಳಿದರು.

ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾ ಡಿದರು.

ಭಾರತೀಯ ವಾಸ್ತುಶಿಲ್ಪ ಕಲೆಯು ಇತಿಹಾಸವನ್ನು ಸೃಷ್ಟಿಸಿದೆ. ಇಂದು ದೇಶ-ವಿದೇಶಗಳಿಂದ ಭಾರ ತೀಯ ವಾಸ್ತುಶಿಲ್ಪವನ್ನು ಅಧ್ಯಯನ ಮತ್ತು ಸಂಶೋಧನೆ ಮಾಡಲು ವಿದ್ವಾಂಸರು ಆಗಮಿಸುತ್ತಿದ್ದಾರೆ ಎಂದು ಅವರು ಹೇಳಿದರು.

ಉಪನ್ಯಾಸರಾಗಿ ಪ್ರಾಧ್ಯಾಪಕಿ ಡಾ. ಸವಿತಾ ಪಂಪಾಪತಿ ಬಡಿಗೇರ್ ಅವರು ಮಾತನಾಡಿ, ಪ್ರತಿಯೊಂದು ಕಲ್ಲಿನಲ್ಲಿ ಜೀವಂತಿಕೆ ಕಾಣಲು ತೋರಿಸಿಕೊಟ್ಟವರು ಅಮರಶಿಲ್ಪಿ ಜಕಣಾಚಾರಿ. ಅವರ ಜೀವನ ಸಾಧನೆಗಳು ಮುಂದಿನ ಪೀಳಿಗೆಗೆ ಪರಿಚಯಿಸುವ ಕೆಲಸ ನಿರಂತರವಾಗಿ ಮಾಡಬೇಕಿದೆ ಎಂದು ಅಭಿಪ್ರಾಯ ಪಟ್ಟರು.

ಈ ಸಂದರ್ಭದಲ್ಲಿ ಮದಾನ 'ಗುಂದಿ ಸರಸ್ವತಿ ಸಂಸ್ಥಾನ ಮೂಲ ಪೀಠದ ವಿಶ್ವಕರ್ಮ ಶ್ರೀಮದ್ ಮೌನೇಶ್ವರ ಮಹಾಸ್ವಾಮಿಗಳು, ಸೂರ್ಯನಾರಾಯಣ ಮಹಾ ಸ್ವಾಮಿಗಳು, ಬ್ರಹ್ಮ ಗಣೇಶ, ರಾಮು ಗಾಣದಾಳ, ಮಾರುತಿ ಬಡಿಗೇ,ರ್ ಡಾ.ವೆಂಕಟೇಶ, ಬ್ರಹ್ಮಯ್ಯ, ಈಶ್ವರ, ನಾಗರಾಜ ಪತ್ತ,ರ್ ಮಹೇಶ ಮಿಲಿಟರಿ, ಜನಾರ್ದನ, ಭೀಮಯ್ಯ, ಮಾನಪ್ಪ ಬಡಿಗೇ,ರ್ ರವಿ ಕುಮಾರ, ಜನಾರ್ದನ, ಡಾ.ಅರುಣಾ ಮಸ್ಕಿ, ಈರಣ್ಣ, ಸೇರಿದಂತೆ ಅನೇಕರು ಇದ್ದರು.

ಹಟ್ಟಿಯಲ್ಲಿ ಯುವತಿಯ ಕೊಲೆ; ಮರ್ಯಾದೆಗೇಡು ಹತ್ಯೆ ಖಂಡಿಸಿ ಪ್ರತಿಭಟನೆ



ಲಿಂಗಸುಗೂರು,ಜ.03-

ಹುಬ್ಬಳ್ಳಿಯಲ್ಲಿ ನಡೆದ ಮರ್ಯಾದೆಗೇಡು ಹತ್ಯೆ ಹಾಗೂ ಲಿಂಗಸುಗೂರು ತಾಲ್ಲೂಕಿನ ಹಟ್ಟಿ ಪಟ್ಟಣದಲ್ಲಿ ನಡೆದ ಜ್ಯೋತಿ ಎಂಬ ಯುವತಿಯ ನಿಗೂಢ ಸಾವಿನ ಪ್ರಕರಣಗಳಲ್ಲಿ ನಿಷ್ಪಕ್ಷಪಾತ ತನಿಖೆ ನಡೆಸಿ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿ ರಾಜ್ಯ ಮಹಿಳಾ ಒಕ್ಕೂಟದ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಹಟ್ಟಿ ಪಟ್ಟಣದ ಪಾಮನಕಲ್ಲೂರ ಕ್ರಾಸ್‌ನಿಂದ ಆರಂಭವಾದ ಮೆರವಣಿಗೆ ಹಳೆ ಬಸ್ ನಿಲ್ದಾಣ, ಕೋಠಾ ಕ್ರಾಸ್ ಮೂಲಕ ಸಾಗುತ್ತಾ ಕೆನರಾ ಬ್ಯಾಂಕ್ ವರೆಗೆ ತೆರಳಿ, ಅಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಕಳೆದ ವಾರ ಲಿಂಗಸುಗೂರು ತಾಲ್ಲೂಕಿನ ಹಟ್ಟಿ ಪಟ್ಟಣ ವ್ಯಾಪ್ತಿಯ ಹಿರೇನಗನೂರು ಗ್ರಾಮದ ನಿವಾಸಿ, ಸ್ಟಾಫ್ ನರ್ಸ್ ಜ್ಯೋತಿ ಅವರನ್ನು ರೋಡ್ ರೋಲರ್ ವಾಹನಕ್ಕೆ ನೇಣು ಬಿಗಿದು ಕೊಲೆ ಮಾಡಲಾಗಿದೆ. ಇದು ಪೂರ್ವ ಯೋಜಿತ ಕೊಲೆಯಾಗಿದೆ ಎಂದು ಆರೋಪಿಸಿದ ಪ್ರತಿಭಟನಾಕಾರರು, ಕೂಡಲೇ ಆರೋಪಿಗಳನ್ನು ಬಂಧಿಸಿ ಕಠಿಣ ಶಿಕ್ಷೆಗೆ ಗುರಿಪಡಿಸಬೇಕೆಂದು ಒತ್ತಾಯಿಸಿದರು.

ಹಟ್ಟಿ ಪಟ್ಟಣದಲ್ಲಿ ಇಂತಹ ಅನೇಕ ಮಹಿಳೆಯರ ಮೇಲಿನ ದೌರ್ಜನ್ಯ ಹಾಗೂ ಹತ್ಯೆ ಪ್ರಕರಣಗಳು ನಡೆಯುತ್ತಿದ್ದು, ಅವು ಬಹುತೇಕ ಬೆಳಕಿಗೆ ಬಾರದೆ ಮಹಿಳೆಯರು ಬಲಿಯಾಗುತ್ತಿದ್ದಾರೆ. ಇಂತಹ ಎಲ್ಲಾ ಪ್ರಕರಣಗಳನ್ನು ತೀವ್ರವಾಗಿ ವಿರೋಧಿಸುವುದರ

3ನೇ ಪುಟಕ್ಕೆ

ಶ್ರೀ ಕ್ಷೇತ್ರ ನೀಲಗಲ್ ಮತ್ತು ಎನ್,ಗಣೆಕಲ್ ಸಂಸ್ಥಾನ ಬೃಹನ್ಮಠ ಶ್ರೀ ಶಾಂಭವಿ ಶಾಂತ ಮಲ್ಲೇಶ್ವರ ತಾತನ ಜಾತ್ರೆ ಮಹೋತ್ಸವ

ಸಿರವಾರ,ಜ.03-



ತಾಲೂಕಿನ ಸಮೀಪದ ನೀಲಗಲ್ ಬೃಹನ್ಮಠದಲ್ಲಿ 10ದಿನಗಳ ಕಾಲ ನೆಡೆಯುವ ಜಾತ್ರಾ ಮಹೋತ್ಸವದ ಪ್ರಯುಕ್ತ ಲೋಕ ಕಲ್ಯಾಣಾರ್ಥವಾಗಿ ಮಹಾ ಚಂಡಿಕಾ ಯಾಗ ಹಾಗೂ ಸಾಮೂಹಿಕ ವಿವಾಹ, ಶಿವಶರಣೆ ಶ್ರೀ ಹೇಮರೆಡ್ಡಿ ಮಲ್ಲಮ್ಮ ತಾಯಿಯ ಪುರಾಣ ಪ್ರವಚನ, ಅಯ್ಯಾಚಾರ ದೀಕ್ಷಾ ಕಾರ್ಯಕ್ರಮ ದಿನಾಂಕ 04 ರಿಂದ 13- ವರಿಗೆ ನೆಡೆಯಲಿದೆ.

ದಿನಾಂಕ 04-01-2026 ಭಾನುವಾರ ಪುರಾಣ ಪ್ರಾರಂಭ ಉದ್ಘಾಟನೆ :- ಶ್ರೀ ಪರಮ ಪೂಜ್ಯ ಶ್ರೀಡಾ. ಶ್ರೀ ಸಿದ್ಧತೋಟೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ಶ್ರೀ ಕೋರಿ ಸಿದ್ದೇಶ್ವರ ಮಹಾಸಂಸ್ಥಾನ ಮಠ, ನಾಲವಾರ, ಶ್ರೀಗಳು ನೆರವೇರಿಸಲಿದ್ದಾರೆ.

ದಿನಾಂಕ 09 ಶುಕ್ರವಾರ ಮಹಿಳೆಯರಿಂದ ಲಘು ರಥೋತ್ಸವ ಕಾರ್ಯಕ್ರಮ ನೆಡೆಯಲಿದೆ ಶ್ರೀ ಮನ್ಮಮ ಹಾರಾಜ ನಿರಂಜನ ಜಗದ್ಗುರು ಫಕೀರ ದಿಂಗಾಲೇಶ್ವರ ಮಹಾಸ್ವಾಮಿಗಳು.ಶ್ರೀ ಜಗದ್ಗುರು ಫಕೀರೇಶ್ವರ ಭಾವೈಕ್ಯತಾ ಸಂಸ್ಥಾನ ಪೀಠ, ಶಿರಹಟ್ಟಿ, ಬಾಲೆಹೊಸೂರು ರವರು ದಿವ್ಯ ಸಾನಿಧ್ಯ ವಹಿಸಲಿದ್ದಾರೆ.

ದಿ.10 ರಂದು ಸಂಜೆ 5-00 ಕ್ಕೆ ಅದ್ದೂರಿಯಾಗಿ ಮಹಾರಥೋತ್ಸವ ಕಾರ್ಯಕ್ರಮ ನೆಡೆಯಲಿದೆ ರಥೋತ್ಸವಕ್ಕೆ ಪೊಲೀಸ್ ಉಪ ಮಹಾ ನಿರೀಕ್ಷಕರು ()ಯವರಾದ ಖ್ಯಾತವಾಗ್ಮಿ ಶ್ರೀ ರವಿ ಡಿ. ಚನ್ನಣ್ಣವರ್ ಚಾಲನೆ ನೀಡಲಿದ್ದಾರೆ.

ದಿನಾಂಕ-11-01-2026 ಬೆಳಿಗ್ಗೆ ಎತ್ತುಗಳಿಂದ ಭಾರ ಎಳಿಯುವ ಸ್ಪರ್ಧೆ ನೆಡೆಯಲಿದೆ. ದಿನಾಂಕ 12-01-2026 ಸಂಜೆ ಶಾಲಾ ಮಕ್ಕಳಿಂದ ಸಂಸ್ಕೃತಿಕ ಕಾರ್ಯಕ್ರಮ ನೆಡೆಯಲಿವೆ. ದಿನಾಂಕ 13-01-2026ರಂದು ಸಮಾರೋಪ ಸಮಾರಂಭ ನೆಡೆಯಲಿದೆ.

10ದಿನಗಳ ಕಾಲ ನೆಡೆಯುವ ಜಾತ್ರಾ ಕಾರ್ಯಕ್ರಮ ದಲ್ಲಿ ಎಲ್ಲರೂ ಪಾಲ್ಗೊಂಡು ಗುರುಗಳ ಕೃಪೆಗೆಪಾತ್ರರಾಗಬೇಕಾಗಿ ಶ್ರೀಮಠದ ಗುರುಗಳು ಪತ್ರಿಕಾ ಪ್ರಕಟಣೆಯಲ್ಲಿ ಮೂಲಕ ತಿಳಿಸಿದರು.

ಹೀರಾ ಕಾಯಕ ಗ್ರಾಮ ಪಂಚಾಯತಿಗೆ ಪಂಚಾಯತ್ ರಾಜ್ ಆಯುಕ್ತಾಲಯದ ಆಯುಕ್ತರು ಭೇಟಿ- ಪರಿಶೀಲನೆ

ರಾಯಚೂರು,ಜ.03-

ಕಾಯಕ ಗ್ರಾಮ ಕಾರ್ಯಕ್ರಮ ಅನುಷ್ಠಾನದ ಮೇಲ್ವಿಚಾರಣೆ ಮಾಡಲು ಇಂದು ಸಿರವಾರ ತಾಲೂಕಿನ ಹೀರಾ ಗ್ರಾಮ ಪಂಚಾಯತಿಗೆ ಪಂಚಾಯತ್ ರಾಜ್ ಆಯುಕ್ತಾಲಯದ ಕಲಬುರ್ಗಿ ವಿಭಾಗದ ಆಯುಕ್ತರು ಹಾಗೂ ಕಾಯಕ ಗ್ರಾಮ ನೋಡಲ್ ಅಧಿಕಾರಿಗಳಾದ ಬಿ.ನವೀನ್ ಕುಮಾರ್ ರವರ ನೇತೃತ್ವದ ತಂಡ ಆಗಮಿಸಿತ್ತು.

ಈ ಭೇಟಿಯಲ್ಲಿ ಮೊದಲಿಗೆ ಗ್ರಾಮ ಪಂಚಾಯತಿ ಕಾರ್ಯಾಲಯಕ್ಕೆ ತೆರಳಿ ಏಪ್ರಿಲ್-2025 ರಿಂದ ನವೆಂಬ-ರ್ ತಿಂಗಳ ಅವಧಿಯಲ್ಲಿ ಅನುಷ್ಠಾನ ಮಾಡಿರುವ ಕುಡಿಯುವ ನೀರು ಮತ್ತು ಬೀದಿ ದೀಪಗಳ ವಿದ್ಯುತ್ ಬಿಲ್ ಸೇರಿದಂತೆ ಇನ್ನಿತರ ವಿಷಯಗಳಿಗೆ ಸಂಬಂಧಿಸಿದ ಕಡತಗಳನ್ನು ಪರಿಶೀಲನೆ ಮಾಡಿದರು.

ನಂತರ ಹೀರಾ ಗ್ರಾಮ ಪಂಚಾಯಿತಿಯ ಅರಿವು ಕೇಂದ್ರ, ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಕ್ಕೆ ಭೇಟಿ ನೀಡಿ ಕೇಂದ್ರದ ಮೇಲ್ವಿಚಾರಕರೊಂದಿಗೆ ಸಂವಾದ ನಡೆಸಿದರು ಅವರ ಕಾರ್ಯವೈಕರಿ ದಿನನಿತ್ಯದ ಕಾರ್ಯಗಳು ಹಾಗೂ ಕೇಂದ್ರಕ್ಕೆ ಭೇಟಿ ನೀಡುವ ಓದುಗರ ಕುರಿತು ಮಾಹಿತಿ ಪಡೆದುಕೊಂಡರು. ಅಲ್ಲದೆ ಕೇಂದ್ರದಲ್ಲಿ ಇದ್ದಂತ ವಿದ್ಯಾರ್ಥಿಗಳು ಹಾಗೂ ಹಿರಿಯ ನಾಗರಿಕರೊಂದಿಗೆ ಸಂವಾದ ನಡೆಸಿದರು. ಕೇಂದ್ರದಲ್ಲಿ ಇಂಟರ್ನೆಟ್ ಕಂಪ್ಯೂಟರ್ ಸೌಲಭ್ಯ ಒದಗಿಸಲಾಗಿರುತ್ತದೆ ಇವುಗಳ ಸದುಪಯೋಗದ ಕುರಿತು ಸಂವಹನ ನಡೆಸಿದರು ಹಾಗೂ ಕರಾವಸುಲಿಗಾರರು ಕರವಸೂಲಿಯನ್ನು ನಡೆಸಿ ಗ್ರಂಥಾಲಯದ ಸೌಲಭ್ಯಗಳಿಗೆ ವಿನಿಯೋಗಿಸುವಂತೆ ಸೂಚನೆ ನೀಡಿದರು.

ಗ್ರಂಥಪಾಲಕರು ಸಮಯಾನುಸಾರ ಕೇಂದ್ರವನ್ನು ತೆರೆಯುವುದು ಹಾಗೂ ಓದುಗರಿಗೆ ಉತ್ತಮ ವಾತಾವರಣ ಒದಗಿಸುವುದು ಹಾಗೂ ಸಕಾಲದಲ್ಲಿ ಸ್ಪಂದಿಸುವಂತೆ ಸೂಚನೆ ನೀಡಿದರು. ಅಲ್ಲದೆ ಕೇಂದ್ರವನ್ನು ಅತ್ಯಂತ ಶುಚಿ ಹಾಗೂ ಉತ್ತಮವಾಗಿ ಹೊಂದಿರುವುದನ್ನು ಗಮನಿಸಿ ಗ್ರಂಥ ಪಾಲಕರನ್ನು ಅಭಿನಂದಿಸಿದರು.

ನಂತರ ಅಂಗನವಾಡಿ ಕಾರ್ಯಕರ್ತೆಯರೊಂದಿಗೆ ಸಂವಾದ ಮಾಡಿದ ಆಯುಕ್ತರು, ಅಂಗನವಾಡಿ ಕೇಂದ್ರಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಪಂಚಾಯತಿ ವತಿಯಿಂದ ಪಡೆದುಕುಂಡು ಸಮರ್ಪಕವಾಗಿ ನಿರ್ವಹಿಸುವಂತೆ ಸೂಚಿಸಿದರು.

ನಂತರ ಸರಕಾರಿ ಪ್ರೌಢಶಾಲೆಗೆ ಭೇಟಿ ನೀಡಿ 2025-26ನೇ ಸಾಲಿನ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬರುವಂತೆ ವಿದ್ಯಾರ್ಥಿಗಳನ್ನು ತಯಾರಿ ಮಾಡಬೇಕು ಎಂದು ಶಿಕ್ಷಕರಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಪಂಚಾಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶಶೀಧರ್ ಸ್ವಾಮಿ,

ಪಂ.ಅ.ಅಧಿಕಾರಿ ಶರೀಫ್ ಸಾಬ್, ಶಿಕ್ಷಕರು, ಕಾರ್ಯದರ್ಶಿಯವರು,ಗ್ರಂಥಪಾಲಕರು, ಅಂಗನವಾಡಿ ಕಾರ್ಯಕರ್ತೆಯರು, ಗ್ರಾ.ಪಂ.ಸಿಬ್ಬಂದಿ ಇದ್ದರು.



ಸಿರಿಗೇರಿ ಗ್ರಂಥಾಲಯ ವಾಚಕರಿಂದ ಸ್ವಯಂ ಪ್ರೇರಿತ ಶ್ರಮದಾನ

ಸಿರುಗುಪ್ಪ ,ಜ.03-

ತಾಲೂಕಿನ ಸಿರಿಗೇರಿ ಗ್ರಾಮದಲ್ಲಿರುವ ಗ್ರಂಥಾಲಯದ ಮುಂಭಾಗದಲ್ಲಿ ಆವರಣವನ್ನು ಅಲ್ಲಿನ ವಾಚಕರಿಂದ ಸ್ವಯಂ ಪ್ರೇರಿತವಾಗಿ ಸ್ವಚ್ಛಗೊಳಿಸುವ ಮೂಲಕ ಶ್ರಮದಾನ ಮಾಡಲಾಗಿದೆ.

ನಾನಾ ಬಾರಿ ಇಲ್ಲಿನ ಗ್ರಾಮ ಆಡಳಿತ ಹಾಗೂ ಗ್ರಂಥಾಲಯದ ವ್ಿ ೦ ೀ ಲ್ವಿ ಚಾ ರ ್ ಕ ್ ರಿ ಗ ಿ ಸ್ವಚ್ಛತೆಗೊಳಿಸುವಂತೆ ಮನವಿ ಮಾಡಿಕೊಂಡಿದ್ದರು ಯಾವುದೇ ರೀತಿಯ ಪ್ರಯೋಜನವಾಗಿರಲಿಲ್ಲ. ಇದರಿಂದ ಬೇಸತ್ತ ವಾಚಕರು ಕೆಲಸಕ್ಕೆ ಬೇಕಾದ ಪರಿಕರಗಳನ್ನು ತಾವೇ ತಂದು ಗ್ರಂಥಾಲಯದ ಮುಂಭಾಗದಲ್ಲಿನ ಆವರಣವನ್ನು ಸ್ವಚ್ಛಗೊಳಿಸಲಾಯಿತೆಂದು ಸಾಹಿತಿ ಎನ್.ಕುಮಾರ್ ತಿಳಿಸಿದರು.

ಹಿರಿಯ ವಾಚಕರಾದ ಕಲ್ಗುಡಿ ಚಂದ್ರಶೇಖರ ಮಾತನಾಡಿ ಆಧುನಿಕತೆ ಹೆಚ್ಚಾಗುತ್ತಿದ್ದಂತೆ ಗ್ರಂಥದ ಗರ್ಭಗುಡಿಯನ್ನು ಮರೆಯುವುದು ಯಾವುದು ನ್ಯಾಯ.? ಇದಲ್ಲವೇ ನಮ್ಮ ಮೂಲ ಪಾಠಶಾಲೆ. ತಾಲೂಕಿನಲ್ಲಿ ಸಿರಿಗೇರಿ ಗ್ರಾಮವು ಸಾಹಿತ್ಯದ ನಾಡಾಗಿದೆ. ಅಲ್ಲದೇ ಕಲೆಗಳ ತವರೂರು ಆಗಿದೆ.

ಈ ಊರಿನ ಹೆಸರಿಗೆ ಕಪ್ಪು ಚುಕ್ಕೆ ಬಾರದಂತೆ ನಡೆದುಕೊಳ್ಳುವುದು ನಮ್ಮ ಗ್ರಾಮಸ್ಥರ ಆಧ್ಯ ಕರ್ತವ್ಯ. ಆ ನಿಟ್ಟಿನಲ್ಲಿ ಸ್ವಯಂ ಪ್ರೇರಿತವಾಗಿ ಗ್ರಂಥಾಲಯ ಆವರಣವನ್ನು ಸ್ವಚ್ಛಗೊಳಿಸಲು ಕೈ ಜೋಡ್ಸಿದ್ದೇವೆ ಎಂದರು.

ಸ್ವಚ್ಛತಾ ಕಾರ್ಯದಲ್ಲಿ ಗ್ರಂಥ ಪಾಲಕರ ಸಮಿತಿ ಸದಸ್ಯರು, ವಾಚಕರಾದ ದೊಡ್ಡ ಈರಣ್ಣ, ಸಿ.ನಾಗರಾಜ್, ರಾರಾವಿ ಚೆನ್ನಪ್ಪ, ಸುಭಾನ್ ಭಾಷಾ, ಬಸವರಾಜ ಸ್ವಾಮಿ, ಚಾಂದ್ ಬಾಷಾ, ಕೋಳೂರು ಬಸವ, ಕೆ.ಷಣ್ಮುಖ, ವಿ.ರಾಮಾಂಜಿನಿ, ಚೌಡಕಿ ಗೋಪಾಲ, ಮಾಸ್ತಿ ಮಂಜು, ಜೆ.ರಾಜೇಶ್, ಕೆ.ತಿಮ್ಮಪ್ಪ, ಮೇಲ್ವಿಚಾರಕ ಮಹಾದೇವಯ್ಯ ಸ್ವಾಮಿ ಸೇರಿದಂತೆ ಇತರರು ಇದ್ದರು.

ರಾಜ್ಯದಾದ್ಯಂತ ಮೊದಲ ಬಾರಿಗೆ ಮದ್ಯದ ಸನ್ನದುಗಳ ಇ-ಹರಾಜು:

ಕಲಬುರಗಿ: 13 ರಂದು ಹರಾಜು ಪ್ರಕ್ರಿಯೆ -ಸಂಗನಗೌಡ ಪಿ.

ಕಲಬುರಗಿ,ಜ.03-

ಅಬಕಾರಿ ಇಲಾಖೆಯಿಂದ ಕಲಬುರಗಿ ಜಿಲ್ಲೆಯಾದ್ಯಂತ ಖಾಲಿ ಇರುವ 12 ಸಿ.ಎಲ್-2(ಎ) ಮತ್ತು 3 ಸಿಎಲ್-9(ಎ) ಸೇರಿ ಒಟ್ಟು 15 ಮದ್ಯದ ಸನ್ನದುಗಳನ್ನು ನೀಡಲು ಇ-ಹರಾಜು ಪ್ರಕ್ರಿಯೆ ನಡೆಸಲಾಗುತ್ತಿದ್ದು, ಇದೇ ಜನವರಿ 13 ರಂದು ಹರಾಜು ಪ್ರಕ್ರಿಯೆ ನಡೆಯಲಿದೆ ಎಂದು ಅಬಕಾರಿ ಉಪ ಆಯುಕ್ತ ಸಂಗನಗೌಡ ಪಿ. ತಿಳಿಸಿದರು.

ಬುಧವಾರ ತಮ್ಮ ಕಚೇರಿಯಲ್ಲಿ ಕರೆದ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ರಾಜ್ಯದಾದ್ಯಂತ ಇದೇ ಮೊದಲ ಬಾರಿಗೆ ಖಾಲಿ ಇರುವ 569 ವಿವಿಧ ಮಾದರಿಯ ಮದ್ಯದ ಸನ್ನದುಗಳನ್ನು ಪಾರದರ್ಶಕವಾಗಿ ಜನವರಿ 13 ರಿಂದ 20ರ ವರೆಗೆ ಇ-ಹರಾಜು ಪ್ರಕ್ರಿಯೆ ಮೂಲಕ ಲೈಸೆನ್ಸ್ ನೀಡಲಾಗುತ್ತಿದ್ದು, ಕಲಬುರಗಿ ಜಿಲ್ಲೆಗೆ ಸಂಬಂಧಿಸಿದಂತೆ ಜನವರಿ ಜನವರಿ 13 ರಂದು ಮಧ್ಯಾಹ್ನ 3 ರಿಂದ ಸಂಜೆ 5 ಗಂಟೆಯವರೆಗೆ ಹರಾಜು ಪ್ರಕ್ರಿಯೆ ನಡೆಯಲಿದೆ ಎಂದರು.

ಅರ್ಹ ಬಿಡ್ಡುದಾರರು https://www.mstccecommerce.com ಮೂಲಕ ನಿಗದಿತ ಶುಲ್ಕ 1,000 ರೂ. ಭರಿಸಿ ಹೆಸರು ನೋಂದಾಯಿಸಿಕೊಳ್ಳುವುದಲ್ಲದೆ ಅರ್ಜಿ ಶುಲ್ಕ 50,000 ರೂ., ನಿಗದಿತ ಇ.ಎಂ.ಡಿ. ಮೊತ್ತ ಪಾವತಿಸಿ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ. ಸರ್ಕಾರದ ನಿಯಮಾವಳಿಯಂತೆ ಸನ್ನದುಗಳನ್ನು ಪಡೆಯಲು ಎಸ್.ಸಿ-ಎಸ್.ಟಿ., ಸಾಮಾನ್ಯ ಮೀಸಲಾತಿ ವರ್ಗೀಕರಿಸಲಾಗಿದೆ. 2025-26 ರಿಂದ 2029-30ನೇ ಸಾಲಿನ ವರೆಗೆ ಲೈಸೆನ್ಸ್ ನೀಡಲಾಗುತ್ತಿದ್ದು, ನಿಯಮಾವಳಿಯಂತೆ ವಾರ್ಷಿಕ ನವೀಕರಣ ಶುಲ್ಕ ಪಾವತಿಸಬೇಕಾಗುತ್ತದೆ ಎಂದು ಅವರು ಮಾಹಿತಿ ನೀಡಿದರು.



ಜಿಲ್ಲೆಯ ವಿವಿಧ ಅಬಕಾರಿ ವಲಯದಲ್ಲಿನ ಮದ್ಯದ ಸನ್ನದುಗಳ ಮೂಲ ದರಕ್ಕೆ ಶೇ.2ರಂತೆ ಇ.ಎಂ.ಡಿ. ಮೊತ್ತ ಆನ್‌ಲೈನ್ ಮೂಲಕ ಪಾವತಿಸಿ ಬಿಡ್ಡಿನಲ್ಲಿ ಭಾಗವಹಿಸಬಹುದಾಗಿದೆ. ಬಿಡ್‌ದಾರರು ಒಂದಕ್ಕಿಂತ ಹೆಚ್ಚು ಸನ್ನದುಗಳಿಗೆ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿದ್ದು, ಪ್ರತಿ ಸನ್ನದುಗಳಿಗೆ ಪ್ರತ್ಯೇಕ ಅರ್ಜಿ ಶುಲ್ಕ ಮತ್ತು ಮುಂಗಡ ಠೇವಣಿ ಮೊತ್ತ ಪಾವತಿಸಬೇಕಾಗುತ್ತದೆ. ಬಿಡ್‌ದಾರರು ಪ್ರತಿ ಬಿಡ್‌ಗೆ 2 ಲಕ್ಷ ರೂ. ಅಥವಾ ಅದರ ಗುಣಕಗಳ ಹೆಚ್ಚಳಕ್ಕೆ ಬಿಡ್ ಮಾಡಬೇಕು. ಯಶಸ್ವು ಬಿಡ್ ಮಾಡಿರುವ ಬಿಡ್‌ದಾರರನ್ನು (H+1) ಭಾರತ ಸರ್ಕಾರ ಸ್ವಾಮ್ಯದ ಸಂಸ್ಥೆಯಾಗಿರುವ ಎಂ.ಎಸ್.ಟಿ.ಸಿ. ಲಿಮಿಟೆಡ್ ಸಂಸ್ಥೆಯೇ ಅಂತಿಮಗೊಳಿಸಲಿದೆ ಎಂದು ಪಿ. ಸಂಗನಗೌಡ ಮಾಹಿತಿ ನೀಡಿದರು.

ಎಲ್ಲೆಲ್ಲಿ ಸನ್ನದುಗಳು,ಮೂಲ ದರವೆಷ್ಟು?: ಆಳಂದ, ಜೇವರ್ಗಿ ಹಾಗೂ ಸೇಡಂ ವಲಯದಲ್ಲಿ ತಲಾ ಎರಡು ಮತ್ತು ಚಿಂಚೋಳಿಯಲ್ಲಿ ಒಂದು ಸಿ.ಎಲ್-2ಎ ಸನ್ನದುಗಳಿದ್ದು, ಮೂಲ ದರ 80 ಲಕ್ಷ ರೂ. ಮತ್ತು ಇ.ಎಂ.ಡಿ. ಮೊತ್ತ 1.60 ಲಕ್ಷ ರೂ. ಇದೆ. ಕಲಬರಗಿ ವಲಯ-1ರಲ್ಲಿ ಎರಡು ಮತ್ತು ಕಲಬುರಗಿ ವಲಯ-2ರಲ್ಲಿ ಒಂದು ಸಿ.ಎಲ್-2ಎ ಸನ್ನದುಗಳಿದ್ದು, ಮೂಲ ದರ 1.10 ಕೋಟಿ ರೂ. ಮತ್ತು ಇ.ಎಂ.ಡಿ. ಮೊತ್ತ 2.20 ಲಕ್ಷ ರೂ. ಇದೆ.

ಅದೇ ರೀತಿ ಕಲಬರಗಿ ವಲಯ-1ರಲ್ಲಿ ಒಂದು ಮತ್ತು ಕಲಬುರಗಿ ವಲಯ-2ರಲ್ಲಿ ಎರಡು ಸಿ.ಎಲ್-9ಎ ಸನ್ನದುಗಳಿದ್ದು, ಮೂಲ ದರ 1.10 ಕೋಟಿ ರೂ. ಮತ್ತು ಇ.ಎಂ.ಡಿ. ಮೊತ್ತ 2.20 ಲಕ್ಷ ರೂ. ಇದೆ. ಮೂಲ ದರದಿಂದಲೆ ಬಿಡ್ಡು ಆರಂಭವಾಗಲಿದ್ದು, ಕೊನೆಗೆ ಹೆಚ್ಚಿನ ಮೊತ್ತಕ್ಕೆ ಬಿಡ್ಡು ಮಾಡುವವರು ಯಶಸ್ವಿ ಬಿಡ್ಡುದಾರರಾಗಿ ಆಯ್ಕೆಯಾಗುತ್ತಾರೆ. ಸರ್ಕಾರಿ ನೌಕರರು, ಲಾಭದಾಯಕ ಹುದ್ದೆಯಲ್ಲಿರುವವರು, ಸರ್ಕಾರಕ್ಕೆ ಬಾಕಿ ಉಳಿಸಿಕೊಂಡವರು, ನ್ಯಾಯಾಲಯದಿಂದ ಶಿಕ್ಷೆಗೆ ಒಳಗಾದವರು ಲೈಸೆನ್ಸ್ ಪಡೆಯಲು ಅರ್ಹರಿರುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಜನವರಿ 3ಕ್ಕೆ ತರಬೇತಿ: ಇ-ಹರಾಜು ಪ್ರಕ್ರಿಯೆ ಮತ್ತು ತಂತ್ರಾಂಶದ ಬಗ್ಗೆ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯ ಸಂಭಾವ್ಯ ಬಿಡ್‌ದಾರರಿಗೆ ಜಾಗೃತಿ ಮೂಡಿಸಲು ಇದೇ ಜನವರಿ 3 ರಂದು ಬೆಳಿಗ್ಗೆ 11 ರಿಂದ ಸಂಜೆ 4 ಗಂಟೆ ವರೆಗೆ ಕಲಬುರಗಿ ನಗರದ ಸೇಡಂ ರಸ್ತೆಯಲ್ಲಿ ಹಳೇ ಆರ್.ಟಿ.ಓ. ಕಚೇರಿ ಹತ್ತಿರದಲ್ಲಿರುವ ಹೆಚ್.ಕೆ.ಇ. ಶಿಕ್ಷಣ ಸಂಸ್ಥೆಯ ಸಿ.ಪಿ.ಎಂ. ಬಾಲಕರ ಹಾಸ್ಟೆಲ್ ಕ್ಯಾಂಪಸ್ ಆವರಣದಲ್ಲಿರುವ ಎಂ.ಆರ್.ಎಂ.ಸಿ. ಎಸ್.ಎ.ಸಿ (ಸ್ಟೂಡೆಂಟ್ ಎಕ್ಟಿವಿಟಿ ಸೆಂಟರ್) ನಲ್ಲಿ ತರಬೇತಿ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಎರಡು ಜಿಲ್ಲೆಗಳ ಸಂಭಾವ್ಯ ಬಿಡ್ಡುದಾರರು ಇದರಲ್ಲಿ ಭಾಗವಹಿಸಿ ಇ-ಹರಾಜು ಪ್ರಕ್ರಿಯೆ ಬಗ್ಗೆ ಮಾಹಿತಿ ಪಡೆದುಕೊಳ್ಳಬಹುದು ಎಂದು ವಲಯದ ಪ್ರಭಾರಿ ಜಂಟಿ ಅಬಕಾರಿ ಆಯುಕ್ತರಾಗಿರುವ ಸಂಗನಗೌಡ ಪಿ. ಅವರು ಮನವಿ ಮಾಡಿದ್ದಾರೆ.

ಇ-ಹರಾಜು ಪ್ರಕಿಯೆ, ಮೀಸಲಾತಿ, ಅರ್ಹತೆ, ಷರತ್ತು, ನಿಬಂಧನೆ ಸೇರಿದಂತೆ ಹೆಚ್ಚಿನ ಮಾಹಿತಿಗೆ ಅಬಕಾರಿ ಇಲಾಖೆಯ ಪೋರ್ಟಲ್ https://stateexcise.karnataka.gov.in ಪೋರ್ಟಲ್ ಮತ್ತು https://www.mstccecommerce.com ವೀಕ್ಷಿಸಬಹುದಾಗಿದೆ ಎಂದಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಕಲಬುರಗಿ ವಿಭಾಗದ ಜಂಟಿ ಆಯುಕ್ತರ ಕಚೇರಿಯ ಅಬಕಾರಿ ಅಧೀಕ್ಷಕ ರಾಮಣಗೌಡ ಮುದಿಗೌಡ, ಅಬಕಾರಿ ಉಪ ಆಯುಕ್ತರ ಕಚೇರಿಯ ಅಬಕಾರಿ ಅಧೀಕ್ಷಕ ಹಣಮಂತ್ರಾಯ ವಜ್ರಮಟ್ಟಿ ಇದ್ದರು.

''ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಕರಣಾ ದಿನಾಚರಣೆ ''

ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿಯವರ ಶಿಲ್ಪಕಲೆಗಳು ಇಂದಿಗೂ ಜೀವಂತವಾಗಿದೆ-ಉಪನ್ಯಾಸಕ ಡಾ. ಚಿದಾನಂದ ಮೋನಪ್ಪ ಸುತಾರ



ಕಲಬುರಗಿ,ಜ.03-

ಭಾರತ ಸೇರಿದಂತೆ ಹಾಗೂ ವಿಶ್ವದ ವಿವಿಧ ಕಡೆ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿಯವರ ಶಿಲ್ಪಕಲೆಗಳು ಇಂದಿಗೂ ಜೀವಂತವಾಗಿದೆ. ಶಿಲ್ಪಕಲೆಗೆ ಅವರು ನೀಡಿರುವ ಬೇಲೂರು, ಹಳೇಬಿಡು, ಸೋಮನಾಥಪುರ ದೇವಾಲಯಗಳಲ್ಲಿನ ಶಿಲ್ಪಕಲೆಗಳೆ ಸಾಕ್ಷಿ ಎಂದು ಬೀದರ ಬಿ.ವಿ.ಬಿ. ಕಾಲೇಜಿನ ಉಪನ್ಯಾಸಕ ಡಾ. ಚಿದಾನಂದ ಮೋನಪ್ಪ ಸುತಾರ ಅವರು ವಿಶೇಷ ಉಪನ್ಯಾಸ ನೀಡಿ ಮಾತನಾಡಿದರು.

ಗುರುವಾರದಂದು ಡಾ|| ಎಸ್.ಎಂ. ಪಂಡಿತ ರಂಗಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಕಲಬುರಗಿ ಇವರುಗಳ ಸಂಯುಕ್ತಾಶ್ರಯದಲ್ಲಿ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಕರಣಾ ದಿನಾಚರಣೆ 2026ರ ಕಾರ್ಯಕ್ರಮದಲ್ಲಿ ಭಾಗವಹಿಸಿ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಕರಣಾ ದಿನಾಚರಣೆ ಅಂಗವಾಗಿ ರವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಮಾತನಾಡಿದರು. ನಶಿಸಿ ಹೋಗುತ್ತಿರುವ ವಿಶ್ವಕರ್ಮದ ಕುಲಕಸುಬುಗಳನ್ನು ಮುಂದಿನ ಪೀಳಿಗೆಗೆ ಉಳಿಸಿ, ಬೆಳಸಿ ಮುಂದುವರಿಸಲು ಎಲ್ಲರೂ ಪ್ರಯತ್ನ ಮಾಡಬೇಕೆಂದು ಅವರು ತಿಳಿಸಿದರು.

ಅಮರಶಿಲ್ಪಿ 12 ನೇ ಶತಮಾನದಲ್ಲಿ ವಿಷ್ಣುವರ್ಧನ ಆಸ್ಥಾನದಲ್ಲಿ ಶ್ರೇಷ್ಠ ಶಿಲ್ಪಿಗಳಾಗಿದ್ದರು. ಜಗತ್ತಿನ ಅದ್ಭುತ ಶಿಲ್ಪಗಳ ಸಾಲಿನಲ್ಲಿ ಕೆತ್ತಿದ ಕಲಾಕೃತಿಗಳನ್ನು ನೋಡುವುದು ನಮ್ಮ ಸೌಭಾಗ್ಯ. ಮಾಡುವ ಕೆಲಸ ಬಗ್ಗೆ ತಿಳುವಳಿಕೆ ಶ್ರದ್ದೆ, ನಿಷ್ಠೆ ಮತ್ತು ಪ್ರಾಮಾಣಿಕತೆ ಇದ್ದಲ್ಲಿ ಯಶಸ್ಸು ಲಭಿಸುತ್ತದೆ. ಎಂದರು.

ನಮ್ಮೊಳಗಿನ ಕಲೆಯನ್ನು ನಾವು ಗುರುತಿಸಿದರೆ ಸಮಾಜ ನಮ್ಮನ್ನು ಗುರುತಿಸುತ್ತದೆ ಸಾಧಕರನ್ನು ಸ್ಮರಣೆ ಮಾಡಿದರೆ ಸಾಲದು ಅವರ ಗುಣ ಮತ್ತು ಬೆಳೆದು ಬಂದ ಪರಿಶ್ರಮದ ಘಟನೆಗಳನ್ನು ತಿಳಿದು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ಅತಿ ಮುಖ್ಯ ಎಂದು ಅವರ ಜೀವನ ಚರಿತ್ರೆಯ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಿದರು.

ಸುಲೇಪೇಟ್ ವಿಶ್ವಕರ್ಮ ಏಕದಂಡಿಯ ದೊಡೇಂದ್ರ ಸ್ವಾಮಿಗಳು ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ರವರ ಭಾವಚಿತ್ರಕ್ಕೆ ಮಾಲಾರ್ಪಣೆ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ, ನಮ್ಮ ದೇಶ ಶಿಲ್ಪಕಲೆಯ ಮೂಲಕ ಶ್ರೀಮಂತಗೊಳಿಸಬೇಕು. ವಿದೇಶಿಗರು ನಮ್ಮ ನಾಡಿನ ಶಿಲ್ಪಕಲೆಯನ್ನು ನೋಡಲು ಬೆರಗಾಗುವಂತೆ ಶಿಲ್ಪಕಲೆಯನ್ನು ನಿರೂಪಿಸಲಾಗಿದೆ ಎಂದು ಮಾತನಾಡಿದರು.

ಕಲಬುರಗಿ ಮತ್ತು ಅಫಜಲಪೂರ ಮಠದ ಮಹಾಸ್ವಾಮಿಗಳು ವಿಶ್ವಕರ್ಮ ಮೂರು ಜಾವಾದೀಶ್ವರ ಮಠ ಪರಮ ಪೂಜ್ಯ ಪ್ರಣವ ನಿರಂಜನ ಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ, ಅವರು ಪ್ರಪಂಚದ ಬೇರೆ ದೇಶಗಳಿಂದ ನಮ್ಮ ದೇಶಕ್ಕೆ ಶಿಲ್ಪ ಕಲೆಗಳು, ಗುಡಿ ಗುಂಡಾರಗಳು ನೋಡಲು ಬರುತ್ತಾರೆ. ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಕರಣಾ ದಿನಾಚರಣೆಯನ್ನು ನಮ್ಮ ಕರ್ನಾಟಕದಲ್ಲಿ ಆಚರಣೆ ಮಾಡುತ್ತೇವೆ. ಉತ್ತಮ ಶಿಲ್ಪಕಲೆ ತೋರಿಸಿ ಕೊಟ್ಟಿರುವುದೇ ಕರ್ನಾಟಕ ಎಂದು ಹೇಳಿದರು. ಮತ್ತು ಸರ್ಕಾರದ ಸೌಲಭ್ಯ ಹಾಗೂ ಯೋಜನೆಗಳ ಲಾಭ ಪಡೆದುಕೊಳ್ಳಬೇಕೆಂದು ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕಿ ಜಗದೀಶ್ವರಿ ನಾಸಿ ಅವರು ಸ್ವಾಗತಿಸಿದರು.

ಇದೇ ಸಂದರ್ಭದಲ್ಲಿ ಚಂದ್ರಶೇಖರ್ ವೈ. ಶಿಲ್ಪಿ ರಾಷ್ಟ್ರೀಯ ಕರಕುಶಲ ಪ್ರಶಸ್ತಿ ಪುರಸ್ಕೃತರು ಮತ್ತು ವಿಶ್ವಕರ್ಮ ಸಮಾಜದ ಮುಖಂಡರನ್ನು ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಕಾರ್ಯಾಲಯ ಕಚೇರಿಯ ಸಹಾಯಕರಾದ ಶಿವಪ್ರಭು ಹಿರೇಮಠ, ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾದ ಅಧ್ಯಕ್ಷರಾದ ಕಮಲಾಕರ್, ಮಹಾನಗರ ಪಾಲಿಕೆಯ ಮಾಜಿ ಸದಸ್ಯರು ಅರವಿಂದ ಪೋದ್ದಾರ, ಚಿತ್ರಲೇಖ ಟೆಂಗಳಿಕರ್, ಮೌನೇಶ್ವರ ದೇವಸ್ಥಾನ ದ ಅರ್ಚಕರಾದ ಶಿವರಾಜ ಶಾಸ್ತ್ರೀ, ಸಮಾಜದ ಪ್ರತಿನಿಧಿ ಹೋರಾಟಗಾರರಾದ ದೇವೆಂದ್ರ ದೇಸಾಯಿ, ದೇವೆಂದ್ರಪ್ಪ ಸುತ್ತಾರ, ಸೇರಿದಂತೆ ಸಮಾಜದ ಮುಖಂಡರು ಭಾಗವಹಿಸಿದ್ದರು.



ಜಿಲ್ಲಾಧಿಕಾರಿಗಳಿಂದ ಪ್ರಬುದ್ಧ ಅಕಾಡೆಮಿ ಕೇಂದ್ರ ಪರಿಶೀಲನೆ:

ಶೀಘ್ರವೆ ಆರಂಭಗೊಳ್ಳಲಿದೆ ಸ್ವರ್ಧಾತ್ಮಕ ಪರೀಕ್ಷಾ ಪೂರ್ವ ತರಬೇತಿ ಕೇಂದ್ರ

ಕಲಬುರಗಿ,ಜ.03-

ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅವರು ಇತ್ತೀಚೆಗೆ ಸಮಾಜ ಕಲ್ಯಾಣ ಇಲಾಖೆಯಿಂದ ಕಲಬುರಗಿ ನಗರದ ಹೊರವಲಯದ ಅಟಲ್ ಬಿಹಾರಿ ವಾಜಪೇಯಿ ಬಡಾವಣೆಯಲ್ಲಿ ಕೆ.ಕೆ.ಆರ್.ಡಿ.ಬಿ. ಅನುದಾನದಡಿ ಅಂದಾಜು 25 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿರುವ ಪರೀಕ್ಷಾ ಪೂರ್ವ ಉಚಿತ ತರಬೇತಿ ಕೇಂದ್ರ ಪ್ರಬುದ್ಧ ಅಕಾಡೆಮಿ ಗೆ ಭೇಟಿ ನೀಡಿ ಪರಿಶೀಲಿಸಿದರು.

ಸುಮಾರು 10,449,35 ಚ.ಮೀ ವಿಸ್ತೀರ್ಣ ಹೊಂದಿರುವ ಪ್ರಬುದ್ಧ ಅಕಾಡೆಮಿ ತರಬೇತಿ ಕೇಂದ್ರವು ಕಲ್ಯಾಣ ಕರ್ನಾಟಕ ಭಾಗದ ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವನೆ ಹೆಚ್ಚಿಸುವ ಗುರಿಯೊಂದಿಗೆ ಉಚಿತ ಮತ್ತು ಗುಣಮಟ್ಟದ ತರಬೇತಿಯನ್ನು ನೀಡುವ ಉದ್ದೇಶ ಹೊಂದಿದ್ದು, ಶೀಘ್ರವೆ ಕೇಂದ್ರ ಆರಂಭಕ್ಕೆ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಡಿ.ಸಿ. ನಿರ್ದೇಶನ ನೀಡಿದರು.

ಕೇಂದ್ರ ಲೋಕಸೇವಾ ಆಯೋಗ ಮತ್ತು ಕರ್ನಾಟಕ ಲೋಕಸೇವಾ ಆಯೋಗದ ವತಿಯಿಂದ ನಡೆಯುವ ಪ್ರಮುಖ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವ ವಿದ್ಯಾರ್ಥಿಗಳಿಗೆ ಉದ್ದೇಶದೊಂದಿಗೆ ಪ್ರಬುದ್ಧ ಅಕಾಡೆಮಿಯನ್ನು ಸ್ಥಾಪಿಸಲಾಗಿದೆ. ಪ್ರಸ್ತುತ ವಾರ್ಷಿಕ 500 ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಯೋಜಿಸಿದ್ದು, ಮುಂದಿನ ದಿನದಲ್ಲಿ ಈ ಸಂಖ್ಯೆ ಹೆಚ್ಚಿಸಿ ಪ್ರದೇಶದ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವುದು ಸರ್ಕಾರದ ಉದ್ದೇಶವಾಗಿದೆ ಎಂದು ಡಿ.ಸಿ. ಬಿ.ಫೌಜಿಯಾ ತರನ್ನುಮ್ ತಿಳಿಸಿದರು.

ಈ ಕೇಂದ್ರವು ಆಧುನಿಕ ತಂತ್ರಜ್ಞಾನದೊಂದಿಗೆ 125 ವಿದ್ಯಾರ್ಥಿಗಳ ಸಾಮರ್ಥ್ಯ ಹೊಂದಿರುವ ನಾಲ್ಕು ವಿಶಾಲವಾದ ತರಬೇತಿ ಕೊಠಡಿಗಳನ್ನು ಹೊಂದಿದೆ. ಅಂದಾಜು 100 ವಿದ್ಯಾರ್ಥಿ ಸಾಮರ್ಥ್ಯದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅವಶ್ಯವಿರುವ ಎಲ್ಲಾ ಪುಸ್ತಕಗಳನ್ನು ಒಳಗೊಂಡ ಸುಸಜ್ಜಿತ ಗ್ರಂಥಾಲಯ, ಆಡಳಿತ ವಿಭಾಗ, ಡಿಜಿಟಲ್ ಲೈಬ್ರರಿ, ಮೆಂಟರಿಂಗ್ ಕೊಠಡಿಗಳು, ಸ್ವ-ಅಧ್ಯಯನಕ್ಕಾಗಿ ಕ್ಯುಬಿಕಲ್ಸ್ ಸೌಲಭ್ಯ ಇದೆ. ಇದಲ್ಲದೆ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ರಿಯಾಯಿತಿ ದರದಲ್ಲಿ ಉಪಹಾರ ಕೇಂದ್ರ ಹಾಗೂ ಉತ್ತಮ ಪರಿಸರದ ವಾತಾವರಣ ಇಲ್ಲಿ ಕಲ್ಪಿಸಲಾಗಿದೆ.

ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕಿ ಪ್ರೀತಿ ದೊಡ್ಡಮನಿ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಸೋಮಶೇಖರ, ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿ ಸಂಗಮೇಶ, ಕೆ.ಆರ್.ಐ.ಡಿ.ಎಲ್ ಕಾರ್ಯನಿರ್ವಾಹಕ ಅಭಿಯಂತರ ಸೌರಭ್ ಸೇರಿದಂತೆ ಇತರೆ ಅಧಿಕಾರಿಗಳು ಇದ್ದರು.

ಕಲಬುರಗಿ:ಅಕ್ಕಪಡೆ ಯೋಜನೆಯ ಅನುಷ್ಠಾನ ಕುರಿತು ಸಭೆ

ಕಲಬುರಗಿ,ಜ.03-



ಸಂಕಷ್ಟದಲ್ಲಿರುವ ಮಹಿಳೆಯರ ಮತ್ತು ಮಕ್ಕಳಿಗೆ ತಕ್ಷಣದ ರಕ್ಷಣೆ ನೀಡುವ ಸಲುವಾಗಿ ರಾಜ್ಯ ಸರ್ಕಾರವು ಅಕ್ಕಪಡೆ ಯೋಜನೆ ಜಾರಿಗೆ ತಂದಿದೆ ಎಂದು ಕಲಬುರಗಿ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಅಡೂರು ಶ್ರೀನಿವಾಸಲು ಅವರು ಹೇಳಿದರು.

ಅವರು ಬುಧವಾರ ಕಲಬುರಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ಜರುಗಿದ ಅಕ್ಕಪಡೆ ಯೋಜನೆಯ ಅನುಷ್ಠಾನ ಕುರಿತು ಜಿಲ್ಲಾ ಮಟ್ಟದ ಮೇಲ್ವಿಚಾರಣೆ ಮತ್ತು ಪರಿಶೀಲನಾ ಸಮಿತಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿ, ಅಕ್ಕಪಡೆಯ ಅನುಷ್ಠಾನಕ್ಕಾಗಿ ರಾಜ್ಯ ಸರಕಾರವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಕಲಬುರಗಿ ಜಿಲ್ಲೆಗೆ ಮಹೇಂದ್ರ ಬೊಲೆರೋ (ಡಿಸೇಲ್) (ಒಚ್ಚುಟಜಡಿಚಿ ಃಠಟಜಡಿಠ ಃ6 ಃಖ 6.2 (ಆಜಜಟ) ವಾಹನ ಸಂಖ್ಯೆ: ಏಂ 01 ಉ 7635) ಪೊಲೀಸ್ ಇಲಾಖೆಗೆ ಒದಗಿಸಿದ್ದು, ಶಾಲೆ, ಕಾಲೇಜು, ವಿದ್ಯಾರ್ಥಿನಿಯರ ಹಾಗೂ ಬಾಲಕಿಯವರ ವಸತಿ ಗೃಹಗಳಿಗೆ ಭೇಟಿ ನೀಡುವುದು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ತಡೆಯುವುದು, ದೌರ್ಜನ್ಯ, ಹಿಂಸೆ, ನಿರ್ಲಕ್ಷ್ಯ ಅಥವಾ ಶೋಷಣೆ ಎದುರಿಸುತ್ತಿರುವ ಮಹಿಳೆಯರ ಮತ್ತು ಮಕ್ಕಳಿಗೆ ಸಕಾಲಿಕ ಸಹಾಯ ಹಸ್ತ ಮತ್ತು ರಕ್ಷಣೆ ಒದಗಿಸುವುದು, ಸಾರ್ವಜನಿಕ ಮತ್ತು ಖಾಸಗಿ ಸ್ಥಳಗಳಲ್ಲಿ ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆ, ಘನತೆ ಮತ್ತು ಸಬಲೀಕರಣವನ್ನು ಉತ್ತೇಜಿಸುವುದು ಅಕ್ಕಪಡೆ ಯೋಜನೆಯ ಮುಖ್ಯ ಉದ್ದೇಶವಾಗಿದೆ ಎಂದರು.

ಅಕ್ಕಪಡೆ ಯೋಜನೆಯಡಿ 05 ಮಹಿಳಾ ಗೃಹ ರಕ್ಷಕರವರನ್ನೊಳಗೊಂಡ ತಂಡವು ಸ್ಥಳೀಯ ಪೊಲೀಸರ ನಿಕಟ ಸಹಯೋಗದೊಂದಿಗೆ ಬೆಳಿಗ್ಗೆ 7 ಗಂಟೆಯಿಂದ ರಾತ್ರಿ 8 ರವರೆಗೆ 02 ಪಾಳಿಗಳಲ್ಲಿ ಅಂದರೆ ಬೆಳಿಗ್ಗೆ 7 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಮತ್ತು ಮಧ್ಯಾಹ್ನ 2 ರಿಂದ ರಾತ್ರಿ 8ರವರೆಗೆ ಕಾರ್ಯನಿರ್ವಹಿಸಬೇಕು.

ಮಹಿಳಾ ಕಿರುಕುಳ ಪ್ರಕರಣಗಳ ಬಗ್ಗೆ ವ್ಯಾಪ್ತಿಯಲ್ಲಿರುವ ಪೊಲೀಸ್ ಠಾಣೆಗೆ ವರದಿ ಮಾಡಬೇಕು. ಮಹಿಳೆಯರ ಮೇಲಿನ ಕಿರುಕುಳ ಮತ್ತು ಈವ್‌ಟಿಸಿಂಗ್ ತಡೆಗಟ್ಟಲು ಶಾಲೆ, ಕಾಲೇಜು, ಉದ್ಯಾನವನ, ಸಿನಿಮಾ ಮಂದಿರ, ಸ್ಥಳೀಯ ಮಾರುಕಟ್ಟೆಗಳಿಗೆ ನಿಯಮಿತವಾಗಿ ಭೇಟಿ ನೀಡಬೇಕು. ಪೋಕ್ಸೋ, ಬಾಲ್ಯವಿವಾಹ, ಬಾಲ ಕಾರ್ಮಿಕ ಪದ್ದತಿ, ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ, ಮಾದಕ ವಸ್ತುಗಳ ದುರುಪಯೋಗದ ಬಗ್ಗೆ ಜಾಗೃತಿ ಮೂಡಿಸುವುದು, ಸಂಚಾರ ನಿಯಮಗಳ ಬಗ್ಗೆ, ಉಚಿತ ಸಹಾಯವಾಣಿಗಳಾದ 1098, 181, 112 ಇವುಗಳ ಬಗ್ಗೆ ಜಾಗೃತಿ ಮೂಡಿಸುವುದು ಅಕ್ಕಪಡೆ ಯೋಜನೆಯ ಜವಾಬ್ದಾರಿಯಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಅಕ್ಕಪಡೆ ಯೋಜನೆ ಅನುಷ್ಠಾನಕ್ಕಾಗಿ ಬೆಂಗಳೂರಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಿಬ್ಬಂದಿಗಳು ವಾಹನವನ್ನು ತೆಗೆದುಕೊಂಡು ಬರುತ್ತಿದ್ದು, ವಾಹನ ಬಂದ ತಕ್ಷಣ ಅಕ್ಕಪಡೆ ಯೋಜನೆಗೆ ಕಲಬುರಗಿ ಜಿಲ್ಲೆಯಲ್ಲಿ ಚಾಲನೆಗೊಳಿಸಲಾಗುತ್ತದೆ. ಸಮಿತಿಯ ಸದಸ್ಯರು ತಮ್ಮ ಇಲಾಖೆಗೆ ಸಂಬಂಧಪಟ್ಟ ಶಾಲಾ ಕಾಲೇಜುಗಳ, ವಸತಿ ನಿಲಯಗಳ ಪಟ್ಟಿಯನ್ನು ಸಲ್ಲಿಸಬೇಕು. ಅಕ್ಕಪಡೆ ಮಾರ್ಗಸೂಚಿಯಂತೆ ಕಾರ್ಯನಿರ್ವಹಿಸಲು 05 ಮಹಿಳಾ ಗೃಹ ರಕ್ಷಕ ಸಿಬ್ಬಂದಿಗಳಿಗೆ ಹಾಗೂ ಮಹಿಳಾ ಪೊಲೀಸ್ ಸಿಬ್ಬಂದಿಗಳಿಗೆ ತರಬೇತಿ ನೀಡಿ ತಂಡ ಸಿದ್ಧಗೊಳಿಸಿ ಕ್ರಿಯಾ ಯೋಜನೆಯನ್ನು ಸಲ್ಲಿಸಬೇಕು ಎಂದರು. ಸಭೆಯಲ್ಲಿ ಸಮಿತಿಯ ಸದಸ್ಯರಾದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಾದ ಮಂಜುಳಾ ಪಾಟೀಲ, ಗೃಹರಕ್ಷಕ ದಳದ ತರಬೇತಿದಾರರಾದ ಹಣಂತರಾಯ ಗೌಡ ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಕಲಬುರಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾದ ರಾಜಕುಮಾರ ರಾಠೋಡ ಸ್ವಾಗತಿಸಿದರು. ಕೊನೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಶಿವಶರಣಪ್ಪ ವಂದಿಸಿದರು.

ಬಿಎಂಸಿಆರ್‌ಸಿ: ಬ್ಯಾಚುಲರ್ ಆಫ್ ಫಿಸಿಯೋಥೆರಪಿ ಕೋರ್ಸ್ ನೇರ ಪ್ರವೇಶಾತಿಗೆ ಅರ್ಜಿ ಆಹ್ವಾನ

ಬಳ್ಳಾರಿ,ಜ.03-

ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರದಲ್ಲಿ ಪ್ರಸಕ್ತ ಸಾಲಿನಿಂದ ನೂತನವಾಗಿ ಆರಂಭಗೊಂಡ ಬ್ಯಾಚುಲರ್ ಆಫ್ ಫಿಸಿಯೋಥೆರಪಿ ಕೋರ್ಸ್‌ಗೆ ನೇರ ಪ್ರವೇಶಾತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ಡಾ.ಟಿ.ಗಂಗಾಧರ ಗೌಡ ಅವರು ತಿಳಿಸಿದ್ದಾರೆ.

2025-26ನೇ ಸಾಲಿನಿಂದ ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರದಲ್ಲಿ ನೂತನವಾಗಿ ಬ್ಯಾಚುಲರ್ ಆಫ್ ಫಿಸಿಯೋಥೆರಪಿ ಕೋರ್ಸ್ ಆರಂಭಕ್ಕೆ ರಾಜ್ಯ ಸರಕಾರದಿಂದ ಅನುಮೋದನೆ ದೊರಕಿದೆ. ಈ ಹಿನ್ನೆಲೆ ಬಿಪಿಟಿ ಕೋರ್ಸ್‌ನ 40 ಸೀಟ್‌ಗಳಿಗೆ ನೇರವಾಗಿ ಅಭ್ಯರ್ಥಿಗಳ ಪ್ರವೇಶಾತಿಗಾಗಿ ಆಹ್ವಾನಿಸಲಾಗಿದೆ.

ಕೋರ್ಸ್‌ಗೆ ಪ್ರವೇಶಾತಿ ಪಡೆಯುವ ಅಭ್ಯರ್ಥಿಗಳು ಕಡ್ಡಾಯವಾಗಿ ದ್ವಿತೀಯ ಪಿಯುಸಿ ವಿಜ್ಞಾನ (ಪಿಸಿಎಂಬಿ) ವಿಭಾಗದಲ್ಲಿ ತೇರ್ಗಡೆ ಹೊಂದಿರಬೇಕು.

ಜನವರಿ 05ರಿಂದ ಜನವರಿ 07ರವರೆಗೆ ಪ್ರವೇಶಾತಿ ಪ್ರಕ್ರಿಯೆ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರದ ಕಚೇರಿಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇಯ ಪುಟದಿಂದ

ಕೇಂದ್ರ ಕಾರಾಗೃಹಕ್ಕೆ ಡಿಜಿಪಿ ಅಲೋಕ ಕುಮಾರ ಭೇಟಿ, ತಪಾಸಣೆ

ಸಂಚಲನ ಮೂಡಿಸಿದಲ್ಲದೆ, ಜೈಲಿನ ಭದ್ರತೆಯ ಬಗ್ಗೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಟೀಕೆಗೆ ಗುರಿಯಾಗಿತ್ತು. ಈ ಹಿನ್ನೆಲೆಯಲ್ಲಿ ಪರಿಸ್ಥಿತಿಯನ್ನು ಖುದ್ದಾಗಿ ಪರಿಶೀ ಲಿಸಲು ಡಿಜಿಪಿ ಅಲೋಕ್ ಕುಮಾ ರ್ ಅವರು ಅಖಾಡಕ್ಕಿಳಿದಿದ್ದಾರೆ.

ಜೈಲಿನೊಳಗೆ ಮೊಬೈಲ್, ಅಮಲು ಪದಾರ್ಥ ಹಾಗೂ ಇನ್ನಿತರೆ ನಿಷೇಧಿತ ವಸ್ತುಗಳು ಪತ್ತೆಯಾದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಡಿಜಿಪಿ ಅವರ ಈ ದಿಢೀರ್ ಭೇಟಿಯು ಜೈಲು ಸಿಬ್ಬಂದಿ ಹಾಗೂ ಕೈದಿಗಳಲ್ಲಿ ನಡುಕ ಹುಟ್ಟಿಸಿದೆ.

ಪರಿಶೀಲನೆ ಸಂದರ್ಭದಲ್ಲಿ ಕಾರಾಗೃಹ ಇಲಾಖೆ ಎಐಜಿ ಆನಂದ ರೆಡ್ಡಿ, ಉತ್ತರ ವಲಯ ಡಿಐಜಿ ಪಿ.ಶೇಷಾ, ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ, ಜೈಲು ಅಧೀಕ್ಷಕಿ ಡಾ.ಅನಿತಾ ಸೇರಿ ಅನೇಕರು ಇದ್ದರು.

ನಾಲ್ವರ ವಿರುದ್ಧ ಪ್ರಕರಣ ದಾಖಲು:ನಗರದ ಹೊರ ವಲಯ ದಲ್ಲಿರುವ ಕೇಂದ್ರ ಕಾರಾಗೃಹದಲ್ಲಿ ಕೈದಿಗಳು ಅಕ್ರಮವಾಗಿ ಜೂಜಾಟ, ಮದ್ಯ, ಸಿಗರೇಟ್ ಸೇದುವುದು ಸೇರಿದಂತೆ ಹಲವು ಅನೈತಿಕ ಚಟುವಟಿಕೆಗಳ ನಡೆಸುತ್ತಿರುವ ವೀವೀಡಿಯೋ ವೈರಲ್ ಆದ ಬಳಿಕ ಇಲ್ಲಿನ ಫರಹತಾಬಾದ್ ಪೆಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾ ಗಿದೆ.

ಕಾರಾಗೃಹದ ಅಧೀಕ್ಷಕಿ ಡಾ.ಅನಿತಾ ಅವರು ನೀಡಿದ ದೂರಿನ ಮೇರೆಗೆ ಜೈಲಿನೊಳಗೆ ಕುಳಿತು ಇಸ್ಪಿಟ್ ಆಡುತ್ತಾ, ಸಿಗರೇಟ್ ಹಾಗೂ ಮದ್ಯ ಸೇವಿಸುತ್ತಿದ್ದ ಪ್ರಜ್ವಲ್, ಆಕಾಶ್, ರಾಕೇಶ್ ಸೇರಿದಂತೆನಾಲ್ವರು ಕೈದಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೆಲೀಸ್ ಮೂಲಗಳು ತಿಳಿಸಿವೆ.

ಜೂನ್ ಒಳಗಡೆ ತಂಗಭದ್ರಾ ಡ್ಯಾಮಗೆ ಹೊಸ ಕ್ರಸ್ಟ್ ಗೇಟ್ ಅಳವಡಿಸುತ್ತೇವೆ: ಸಿಎಂ

ಸಾಮಾನ್ಯರಿಗೆ ಅನ್ಯಾಯ ಮಾಡುತ್ತಿದೆ ಎಂದು ಮುಖ್ಯಮಂತ್ರಿಗಳು ಅಸಮಧಾನ ವ್ಯಕ್ತಪಡಿಸಿದರು.

ಶಾಸಕರಿಗೆ ಅಭಿನಂದನೆ:

ಸಿಂಧನೂರು ತಾಲೂಕಿನ ಸಮಸ್ತ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಯೋಚಿಸಿ, ಕೆಕೆಆರ್ ಡಿಬಿಯಿಂದ 14 ಬಸ್ ಗಳ ಸೌಕರ್ಯ ಕಲ್ಪಿಸುವಲ್ಲಿ ಶ್ರಮಿಸಿದ ಸಿಂಧನೂರ ಶಾಸಕರಾದ ಹಂಪನಗೌಡ ಬಾದರ್ಲಿ ಅವರಿಗೆ

ವಿದ್ಯಾರ್ಥಿಗಳ ಪರವಾಗಿ ಅಭಿನಂದನೆ ತಿಳಿಸುತ್ತೇನೆ ಎಂದು ಮುಖ್ಯಮಂತ್ರಿಗಳು ಸಂತಷ ವ್ಯಕ್ತಪಡಿಸಿದರು.

ಅಂಬಾದೇವಿ ದರ್ಶನದಿಂದ ಸಂತಷ: ಸೋಮಲಾಪುರದ ಸಿದ್ದಪರ್ವತಕ್ಕೆ ಆಗಮಿಸಿ ಶ್ರೀ ಅಂಬಾದೇವಿ ಮಹೋತ್ಸ ವ ಮತ್ತು ಜಂಬೂ ಸವಾರಿಗೆ ಸಂತೋಷದಿಂದ ಚಾಲನೆ ನೀಡಿದ್ದೇನೆ. ಶ್ರೀ ಅಂಬಾದೇವಿಯ ದರ್ಶನ ಪಡೆದಿರುವುದು ನನ್ನ ಪುಣ್ಯ ಎಂದೇ ಭಾವಿಸಿದ್ದೇನೆ ಎಂದು ತಿಳಿಸಿದ ಮುಖ್ಯಮಂತ್ರಿಗಳು, ನೆರೆದಿದ್ದ ಎಲ್ಲ ಜನತೆಗೆ ಎಲ್ಲ ಭಕ್ತರಿಗೆ ತಾಯಿ ಅಂಬಾದೇವಿ ಒಳ್ಳೆಯದು ಮಾಡಲಿ ಎಂದು ತಾವು ಪ್ರಾರ್ಥಿಸುವುದಾಗಿ ತಿಳಿಸಿದರು.

ಕರ್ನಾಟಕ ರಾಜ್ಯ ಮೂಲಸೌಕರ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಶಾಸಕರಾದ ಹಂಪನಗೌಡ ಬಾದರ್ಲಿ ಅವರು ಅಧ್ಯಕ್ಷತೆ ವಹಿಸಿದ್ದರು.

ಸಮಾರಂಭದಲ್ಲಿ ಸಚಿವರಾದ ಸತೀಶ ಜಾರಕಿಹೊಳಿ, ರಾಮಲಿಂಗಾರೆಡ್ಡಿ, ಡಾ.ಶರಣಪ್ರಕಾಶ ಪಾಟೀಲ, ಶಿವರಾಜ ತಂಗಡಗಿ, ಸಾರಿಗೆ ಸಂಸ್ಥೆಯ ಅಧ್ಯಕ್ಷರಾದ ಅರುಣಕುಮಾರ ಪಾಟೀಲ, ಸಂಸದರಾದ

ರಾಜಶೇಖರ ಹಿಟ್ನಾಳ, ಶಾಸಕರಾದ ಬಸನಗೌಡ ತುರವಿಹಾಳ, ಬಸನಗೌಡ ದದ್ದಲ್, ಬಿ.ಎಂ ನಾಗರಾಜ,

ವಿಧಾನ ಪರಿಷತ್ ಶಾಸಕರಾದ ಎ ವಸಂತಕುಮಾರ, ಬಸವನಗೌಡ ಬಾದರ್ಲಿ,

ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಎಸ್ಪಿ ಅರುಣಾಂಕ್ಷು ಗಿರಿ, ಕಲ್ಯಾಣ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಬಿ ಸುಶೀಲಾ,

ಸಹಾಯಕ ಆಯುಕ್ತರಾದ ಬಸವಣೆಪ್ಪ ಕಲಶೆಟ್ಟಿ, ಸಿಂಧನೂರ ತಹಸೀಲ್ದಾರ ಅರುಣ ದೇಸಾಯಿ, ತಾಲೂಕು ಪಂಚಾಯತ್ ಇಓ ಚಂದ್ರಶೇಖರ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ವೆಂಕನಗೌಡ ಬಾದರ್ಲಿ, ಶ್ರೀ ಅಂಬಾದೇವಿ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರಾದ

ರಂಗನಗೌಡ, ಸೋಮಲಾಪುರ ಗ್ರಾಮ ಪಂಚಾಯತಿ ಅಧ್ಯಕ್ಷೆ ರೇಣುಕಮ್ಮ ಹುಸೇನಪ್ಪ ಮನ್ನಾಪುರ, ಪಿಎಲ್ ಡಿ ಬ್ಯಾಂಕ್ ಅಧ್ಯಕ್ಷ ಎಂ ದೊಡ್ಡಬಸವರಾಜ, ಟಿಎಪಿಸಿಎಂಎಸ್ ಅಧ್ಯಕ್ಷ ಶರಣಪ್ಪ ರಡ್ಡೇರ್, ಸಿಂಧನೂರ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಅನಿಲಕುಮಾರ ವೈ ಹಾಗೂ ಇನ್ನೀತರ ಗಣ್ಯರು ಉಪಸ್ಥಿತರಿದ್ದರು.

ಹಟ್ಟಿಯಲ್ಲಿ ಯುವತಿಯ ಕೊಲೆ; ಮರ್ಯಾದೆಗೇಡು ಹತ್ಯೆ ಖಂಡಿಸಿ ಪ್ರತಿಭಟನೆ

ಜೊತೆಗೆ, ಸಂತ್ರಸ್ತ ಮಹಿಳೆಯರಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ಮಹಿಳಾ ಒಕ್ಕೂಟ ಅಧ್ಯಕ್ಷೆ ವಿದ್ಯಾ ಪಾಟೀಲ್, ಜ್ಯೋತಿ ಕೊಲೆಗೆ ಹಾಕಿರುವ ಸೆಕ್ಷನ್ ಗಳು ಸರಳವಾಗಿವೆ. ಕೂಡಲೇ ಕಠಿಣ ಸೆಕ್ಷನ್ ಸೇರಿಸಿ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು ಹಾಗೂ ಇಂತಹ ಪ್ರಕರಣಗಳು ಮರುಕಳಿಸದಂತೆ ಪೊಲೀಸ್ ಇಲಾಖೆ ಎಚ್ಚೆತ್ತುಕೊಳ್ಳಬೇಕು ಎಂದು ಆಗ್ರಹಿಸಿದರು.

ನಂತರ ಮಾತನಾಡಿದ ವಿರುಪಮಾ ಸಿಂಧನೂರು, ಹಟ್ಟಿ ಪಟ್ಟಣದಲ್ಲಿ ಕೆಲವು ದಿನಗಳಿಂದ ಮಾನಸಿಕ ಅಸ್ವಸ್ಥ ಬಾಲಕಿ ಮೇಲೆ ಅತ್ಯಾಚಾರ, ಸ್ಟಾಫ್ ನರ್ಸ್ ಹಾಗೂ ಇಂತಹ ಹಲವು ಪ್ರಕರಣಗಳು ನಡೆದರೂ ಪೊಲೀಸರು ಕಠಿಣ ಶಿಕ್ಷೆ ವಿಧಿಸುವಲ್ಲಿ ವಿಫಲರಾಗಿದ್ದಾರೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಗುರುರಾಜ್, ಮೌಕ್ಷಮ್ಮ, ಮಾರೆಮ್ಮ ರಾಯಚೂರು, ಗುಂಡಪ್ಪ ಯರಡೋಣ, ಲಕ್ಷ್ಮೀ ಹಕ್ಕಾವಟಗಿ, ರಾಧಾ ಐದನಾಳ, ದುರುಗಪ್ಪ, ಇನ್ನಿತರರು ಉಪಸ್ಥಿತರಿದ್ದರು.

ಜನನ, ಮರಣ ಪ್ರಮಾಣ ಪತ್ರ ಸಕಾಲದಲ್ಲಿ ಸಿಗಬೇಕು



ಕೊಪ್ಪಳ ,ಜ.03-

ಬದುಕಿರುವ ಪ್ರತಿಯೊಬ್ಬ ವ್ಯಕ್ತಿಗೆ ಜನನ ಪ್ರಮಾಣ ಪತ್ರ ತುಂಬಾ ಅಗತ್ಯವಾದ ದಾಖಲೆಯಾಗಿದೆ ಮತ್ತು ವ್ಯಕ್ತಿಯ ಮರಣದ ನಂತರ ಕುಟುಂಬದವರಿಗೆ ಮರಣ ಪ್ರಮಾಣ ಪತ್ರ ಉಪಯುಕ್ತವಾದ ದಾಖಲೆಯಾಗಿದ್ದು, ಜನನ ಮತ್ತು ಮರಣ ಪ್ರಮಾಣ ಪತ್ರಗಳು ಜನರಿಗೆ ಸಕಾಲದಲ್ಲಿ ಸಿಗುವಂತಾಗಬೇಕು ಎಂದು ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಹೇಳಿದರು.

ಅವರು ಶುಕ್ರವಾರ ಕೊಪ್ಪಳ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಸಾಂಖ್ಯಿಕ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ನಾಗರೀಕ ನೋಂದಣಿ ಪದ್ದತಿಯ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

''ಜನನ ಮರಣ ನೋಂದಣಿ ಅಧಿನಿಯಮಗಳು-1969'' ಹಾಗೂ ''ಕರ್ನಾಟಕ ಜನನ ಮರಣ ನೋಂದಣಿ ನಿಯಮಗಳು 1999'' ರನ್ವಯ ಜನನ, ಮರಣ ಮತ್ತು ನಿರ್ಜೀವ ಜನನಗಳ ನೋಂದಣಿ ಕಡ್ಡಾಯವಾಗಿದೆ. ನಿಗದಿತ ಅವಧಿಯೊಳಗೆ ಯಾವುದೇ ಶುಲ್ಕವಿಲ್ಲದೆ ಜನನ ಮರಣ ನೋಂದಣಿ ಮಾಡಲು ಅವಕಾಶವಿದ್ದು, ಆ ಅವಧಿಯೊಳಗೆ ಜನನ ಮರಣ ಮಾಹಿತಿಯು ಸಂಬಂಧಿಸಿದ ತಂತ್ರಾಂಶದಲ್ಲಿ ದಾಖಲಿಸ ಬೇಕು. ಜನನ-ಮರಣ ನೋಂದಣಿಯನ್ನು ಅಧಿನಿಯಮ ಮತ್ತು ನಿಯಮಗಳಂತೆ ಹಾಗೂ 2024ರ ತಿದ್ದುಪಡಿ ನಿಯಮದಂತೆ ಅನುಷ್ಠಾನಕ್ಕೆ ಕ್ರಮವಹಿಸಬೇಕು. ಶೇ.100 ರಷ್ಟು ಜನನ, ಮರಣ ಮತ್ತು ನಿರ್ಜೀವ ಜನನಗಳ ಘಟನೆಗಳನ್ನು ನೋಂದಾವಣೆ ಆಗಿರುವ ಬಗ್ಗೆ ಪರಿಶೀಲನೆ ಕೈಗೊಳ್ಳಬೇಕು. ವಿಳಂಭ ನೋಂದಣಿ ಘಟನೆಗಳನ್ನು ತಡೆಯುವ ಬಗ್ಗೆಯೂ ಸಹ ಕ್ರಮ ವಹಿಸಬೇಕು. ಶೇ. 100ರಷ್ಟು ವರದಿ ಸಾಮರ್ಥ್ಯ ಸಾಧಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜನನ ಮತ್ತು ಮರಣ ನೋಂದಣಿ ಕಾರ್ಯವನ್ನು ಜಿಲ್ಲೆಯ ಎಲ್ಲಾ ಗ್ರಾಮ ಲೆಕ್ಕಿಗರು, ವೈದ್ಯಾಧಿಕಾರಿಗಳು ಹಾಗೂ ನಗರಸಭೆ ಪೌರಾಯುಕ್ತರು ಸರಿಯಾಗಿ ನಿರ್ವಹಿಸಬೇಕು. ನೋಂದಣಿ ವೇಳೆ ಸೂಕ್ತ ಪರಿಶೀಲನೆ ಕೈಗೊಂಡು ಅದರ ವದಿಯನ್ನು ಸಲ್ಲಿಸಬೇಕು. ವಿಳಂಬ ನೋಂದಣಿ ಘಟನೆಗ 'ಳನ್ನು ತಡೆಬೇಕು. ಯಾವುದೇ ದಾಖಲಾತಿ ಬಾಕಿ ಉಳಿಯದಂತೆ ಶೇ.100ರಷ್ಟು ನೋಂದಣಿ ಮಾಡುವಂತೆ ಕ್ರಮವಹಿಸಬೇಕು ಎಂದು ಹೇಳಿದರು.

ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಪ್ರಕಾಶ ಪಿ. ದೇಶಪಾಂಡೆ ಅವರು ಮಾತ ನಾಡಿ, ಜನನ, ಮರಣ ಮತ್ತು ನಿರ್ಜೀವ ಜನನಗಳ ನೋಂದಣಿ ಕಡ್ಡಾಯವಾಗಿರುತ್ತದೆ. 21 ದಿವಸ ಗಳೊಳಗಾಗಿ ಯಾವುದೇ ಶುಲ್ಕವಿಲ್ಲದೆ ಜನನ ಮರಣ ನೋಂದಣಿಯನ್ನು ಮಾಡಲಾಗುವುದು. 2024ರ ತಿದ್ದುಪಡಿ ನಿಯಮದಂತೆ ಜನನ ಮರಣ ಹೆಚ್ಚುವರಿ ಪ್ರಮಾಣ ಪತ್ರಗಳ ಶುಲ್ಕವು ಈಗ ರೂ.50 ಆಗಿರುತ್ತದೆ. ವಿಳಂಬ (ತಡ) ನೋಂದಣಿಗೆ ಘಟನೆ ಸಂಭವಿಸಿದ 21 ದಿನಗಳಿಂದ 30 ದಿನದವರೆಗೆ ಶುಲ್ಕ 20 ಆಗಿರುತ್ತದೆ. ಘಟನೆ ಸಂಭವಿಸಿದ 30 ದಿನಗಳ ನಂತರ ಒಂದು ವರ್ಷದವರೆಗೆ ಶುಲ್ಕ ರೂ. 50 ಆಗಿರುತ್ತದೆ. ಗಂಗಾವತಿ ತಾಲ್ಲೂಕಿನಲ್ಲಿ 85 ನೋಂದಣಿ ಘಟಕಗಳು, ಕನಕಗಿರಿ 67, ಕಾರಟಗಿ 36, ಕೊಪ್ಪಳ 180, ಕುಕನೂರು 65, ಕುಷ್ಟಗಿ 197 ಹಾಗೂ ಯಲಬುರ್ಗಾ 101 ಸೇರಿ ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು 731 ನೋಂದಣಿ ಘಟಕಗಳಿವೆ. ಇದರಲ್ಲಿ 713 ಗ್ರಾಮಾಂತರ ಮತ್ತು 18 ನಗರ ಪ್ರದೇಶದಲ್ಲಿವೆ ಎಂದರು.

ಜನನ ಮರಣ ಘಟನೆಗಳನ್ನು ಇ-ಜನ್ಮ ತಂತ್ರಾಂಶದ ಮೂಲಕ ನೋಂದಣಿ ಮಾಡುವ ಕಾರ್ಯ 2015 ರಿಂದ ಪ್ರಾರಂಭಿ ಸಲಾಗಿದೆ. ತದನಂತರ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ 2018 ರಿಂದ ಸಂಪೂರ್ಣವಾಗಿ ಇ-ಜನ್ಮ ತಂತ್ರಾಂಶದ ಮೂಲಕ ಜನನ ಮರಣ ಘಟನೆಗಳನ್ನು ನೋಂದಣಿ ಮಾಡುವ ಕಾರ್ಯವನ್ನು ಜಿಲ್ಲೆಯಾದ್ಯಂತ ಕಡ್ಡಾಯಗೊಳಿಸ ಲಾಗಿದೆ. ಎಲ್ಲಾ ನೋಂದಣಾಧಿಕಾರಿಗಳು ಅಥವಾ ಉಪನೋಂದಣಾಧಿಕಾರಿಗಳು ಕಡ್ಡಾಯವಾಗಿ ಡಿಜಿಟಲ್ ಸಹಿಯೊಂದಿಗೆ ಪ್ರಮಾಣ ಪತ್ರಗಳನ್ನು ವಿತರಣೆ ಮಾಡಬೇಕು. ಜನನ ಮರಣ ನೋಂದಣಿ ಘಟಕಗಳ ಪರಿಶೀಲನೆ ಸೆಕ್ಷನ್ 18ರ ಪ್ರಕಾರ ಜಿಲ್ಲೆಯ ಎಲ್ಲಾ ನೋಂದಣಿ ಘಟಕವು ನಿಯಮಾನುಸಾರ ನೋಂದಣಿ ಚಟುವಟಿಕೆ ನಡೆಯುತ್ತಿರುವ ಬಗ್ಗೆ ಹಾಗೂ ಶೇಕಡಾ 100ರಷ್ಟು ಘಟನೆಗಳು ದಾಖಲಾತಿಯಾಗಿರುವ ಬಗ್ಗೆ ಪರಿಶೀಲನೆಯನ್ನು ಕಂದಾಯ, ನಗರಾಭಿವೃದ್ಧಿ ಅಥವಾ ಸಾಂಖ್ಯಿಕ ಇಲಾಖೆಯ ಅಧಿಕಾರಿಗಳು ನಡೆಸಬೇಕಾಗಿರುತ್ತದೆ ಎಂದು ತಿಳಿಸಿದರು.

ಸಭೆಯಲ್ಲಿ ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಪಿ.ವೈ ಶೆಟ್ಟೆಪ್ಪನವರ್, ತಾಲ್ಲೂಕು ಯೋಜನಾಧಿಕಾರಿ ರಾಜಾಸಾಬ ನದಾಫ್, ಜಿಲ್ಲಾ ಸಾಂಖ್ಯಿಕ ಇಲಾಖೆ ಸಹಾಯಕ ನಿರ್ದೇಶಕ ಅಮರೇಶ ಎಸ್,ಕೆ., ಸಹಾಯಕ ಸಾಂಖ್ಯಿಕ ಅಧಿಕಾರಿಗಳಾದ ಕಾವಾಕ್ಷೀ ಪ್ಯಾಟಿ ಹಾಗೂ ಪ್ರವೀಣ ಅಲಕನೂರ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿ, ಸಿಬ್ಬಂದಿಗಳು ಉಪಸ್ಥಿತರಿದ್ದರು.

ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ । ಭಾವಚಿತ್ರದ ಅದ್ದೂರಿ ಮೆರವಣಿಗೆ

ಶಿಲ್ಪಕಲೆಯಲ್ಲಿ ಜಕಣಾಚಾರಿಯವರ ಕೊಡುಗೆ ಅಪಾರ : ಗದ್ದಿಗೌಡರ

ಬಾಗಲಕೋಟೆ,ಜ.03-

ಭಾರತೀಯ ಶಿಲ್ಪಕಲಾ ಕೌಶಲ್ಯಕ್ಕೆ ಅಪಾರವಾದ ಕೊಡುಗೆಯನ್ನು ನೀಡಿ, ಕಲೆಗಳನ್ನು ಜೀವಂತವಾಗಿರಿಸಿದವರು ಅಮರಶಿಲ್ಪಿ ಜಕಣಾಚಾರಿ ಎಂದು ಸಂಸದ ಪಿ.ಸಿ.ಗದ್ದಿಗೌಡರ ಹೇಳಿದರು.



ನವನಗರದ ಡಾ.ಬಿ.ಆರ್.ಅಂಬೇಡ್ಕರ ಸಭಾಭವನದಲ್ಲಿ ಗುರುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಅವರ ಸಂಸ್ಮರಣಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಭಾರತ ಸೇರಿದಂತೆ ವಿಶ್ವದ ವಿವಿಧ ಕಡೆಗಳಲ್ಲಿ ಜಕಣಾಚಾರಿಗಳ ಶಿಲ್ಪಕಲೆಗಳು ಇಂದಿಗೂ ಜೀವಂತವಾಗಿವೆ. ತಮ್ಮ ಜೀವನವನ್ನು ಮುಡುಪಾಗಿಟ್ಟು ಶಿಲ್ಪಕಲೆಗೆ ಅಪಾರವಾದ ಕೊಡುಗೆ ನೀಡಿದ್ದಾರೆ ಎಂದರು.

ಬೇಲೂರು ಹಳೇಬೀಡು, ಸೋಮನಾಥಪುರ ದೇವಾಲಯಗಳಲ್ಲಿನ ಶಿಲ್ಪಕಲೆಗಳು ಇಂದಿಗೂ ಜೀವಂತವಾಗಿವೆ. ಅಂತಹ ಶಿಲ್ಪಕಲೆಯನ್ನು ನೋಡುವ ಭಾಗ್ಯ ದೊರೆತಿದೆ. ಇಂತಹ ವೈವಿದ್ಯಮಯ ಕಲೆಯಿಂದ ಕೂಡಿದ ಶಿಲ್ಪಕಲೆಯನ್ನು ಮುಂದಿನ ಪೀಳಿಗೆಗೆ ಉಳಿಸಿ ಬೆಳೆಸುವ ಕೆಲಸವಾಗಬೇಕಿದೆ. ಮಕ್ಕಳಿಗೆ ಶಿಕ್ಷಣ ಕೊಡಿಸುವ ಮೂಲಕ ಸಮುದಾಯವರು ಅಭಿವೃದ್ದಿ ಹೊಂದಬೇಕು ಎಂದರು ತಿಳಿಸಿದರು.

ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾ ಮಾತನಾಡಿ ಸೃಷ್ಠಿಗೆ ಕಾರಣರಾದ ವಿಶ್ವಕರ್ಮರು ತಮ್ಮ ಶಿಲ್ಪಕಲೆಯ ಮೂಲಕ ನಾಡಿಗೆ ಪರಿಚಯಿಸಿದ್ದಾರೆ. ತಮ್ಮ ಕಲೆಯ ಮೂಲಕ ನಾಜೂಕಾದ ಹಲವಾರು ದೇವಾಲಯಗಳನ್ನು ನಿರ್ಮಿಸಿ ದಂತಕಥೆಯಾದ ಶಿಲ್ಪಿ ಇರವರಾಗಿದ್ದಾರೆ. ಚಾಲುಕ್ಯರ ಹಾಗೂ ಯೊಯ್ಸಳರ ಶೈಲಿಯ ದೇವಾಲಯಗಳನ್ನು ಬೇಲೂರು ಹಾಗೂ ಹಳೆಬೀಡಿನಲ್ಲಿ ನಿರ್ಮಿಸಿದ್ದಾರೆ ಎಂದರು.

ಜಿಲ್ಲಾಧಿಕಾರಿ ಸಂಗಪ್ಪ ಮಾತನಾಡಿ ಜಕನಾಚಾರಿ ಎಂದರೆ ಕಲ್ಲಿನಲ್ಲಿ ಪ್ರಾಣ ತುಂಬಿದ ಅಮರಶಿಲ್ಪಿ, ಹೊಯ್ಸಳ ಯುಗದ ವೈಭವಶಾಲಿ ವಾಸ್ತುಶಿಲ್ಪದಲ್ಲಿ ಅವರ ಕೈಚಳಕ, ಅವರ ದೃಷ್ಠಿ, ಶಿಸ್ತು ಇಂದು ಕೂಡ ಕಲ್ಲಿನ ಗೋಡೆಗಳ ಮೇಲೆ ಜೀವಂತವಾಗಿ ಮಾತಾಡುತ್ತವೆ. ಇವೆಲ್ಲವೂ ಅಮರಶಿಲ್ಪಿ ಜಕಣಾಚಾರಿಯಂತಹ ಶಿಲ್ಪಿಗಳ ತಪಸ್ಸಿನ ಫಲವಾಗಿದೆ ಎಂದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಜಿಲ್ಲಾ ಅಧ್ಯಕ್ಷ ಅನೀಲಕುಮಾರ ದಡ್ಡಿ ಮಾತನಾಡಿ 12-13ನೇ ಶತಮಾನದಲ್ಲಿ ಕಲೆಗಳಿಗೆ ಹೆಚ್ಚಿನ ಪ್ರೋತ್ಸಾಹ ಇತ್ತು. ಇದರಿಂದಲೇ ಶಿಲ್ಪಕಲೆಯಲ್ಲಿ ಅಪಾರವಾದ ಕೊಡುಗೆ ನೀಡಲು ಜಕಣಾಚಾರಿಯವರಿಗೆ ಸಾಧ್ಯಯಿತು. ಅದನ್ನು ಉಳಿಸಿಕೊಂಡು ಹೋಗುವ ಹೊಣೆ ಇಂದಿನ ಯುವಕರ ಮೇಲೆ ಇದೆ. ಬದಲಾದ ಕಾಲಗಟ್ಟದಲ್ಲಿ ತಂತ್ರಜ್ಞಾನದ ಬಳಕೆಯ ಮೂಲಕ ಮತ್ತು ಮೆರಗು ನೀಡಲಾಗುತ್ತಿದೆ. ಇದರ ಜೊತೆಗೆ ಹಳೆಯದನ್ನು ಮರೆಯಬಾರದು ಎಂದು ತಿಳಿಸಿದರು.

ಉಪನ್ಯಾಸಕರಾಗಿ ಆಗಮಿಸಿದ್ದ ಸುತಗುಂಡಾರ ಎಸ್.ಕೆ.ಪ್ರೌಢಶಾಲೆಯ ಮುಖ್ಯಗುರು ಅಪ್ಪಾಸಾಬ ಬಡಿಗೇರ ಮಾತನಾಡಿ ಪ್ರಪಂಚದ ಎಲ್ಲ ವಿದ್ಯೆಗಳ ಮೂಲವಾಗಿರುವ ಜಕಣಾಚಾರಿ ಅವರನ್ನು ಜಗತ್ತಿನ ಮೊದಲ ಅಭಿಯಂತರ ಎನ್ನಬಹುದಾಗಿದೆ. ಜಕಣಾಚಾರಿಯವರ ಶಿಲ್ಪಕಲೆ ಜಗತ್ತಿನ ಎಲ್ಲಡೆ ಪಸರಿಸಿರುವ ಮೂಲಕ ನಾಡನ್ನು ಶ್ರೀಮಂತವನ್ನಾಗಿ ಮಾಡಿದೆ. ಜಕಣಾಚಾರಿ ಅವರ ಹೆಸರಿನಲ್ಲಿ ಸರಕಾರ ಪ್ರಶಸ್ತಿಯನ್ನು ಕೊಡಮಾಡುತ್ತಿದ್ದು, 2 ಪ್ರಶಸ್ತಿಗಳು ಜಿಲ್ಲೆಗೆ ದೊರೆತಿರುವುದು ಹೆಮ್ಮೆಯ ವಿಷಯವಾಗಿದೆ ಎಂದರು.

ಮಳೆಯರಾಜೇಂದ್ರ ಮಠದ ಜಗನ್ನಾಥ ಶ್ರೀ ಮತ್ತು ನಾಲತ್ವಾಡದ ಸುಧೀಂದ್ರ ಶ್ರೀಗಳು ದಿವ್ಯ ಸಾನಿಧ್ಯವಹಿಸಿ ಆಶೀರ್ವಚನ ನೀಡಿದರು. ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಸಮುದಾಯ ಮುಖಂಡ ಮೌನೇಶ ಬಡಿಗೇರ ಸೇರಿದಂತೆ ಇತರರು ಉಪಸ್ಥಿತರಿದ್ದರು.

ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಅಂಗವಾಗಿ ಹಮ್ಮಿಕೊಂಡ ಜಕಣಾಚಾರಿ ಅವರ ಭಾವಚಿತ್ರದ ಮೆರವಣಿಗೆಗೆ ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ಚಾಲನೆ ನೀಡಿದರು. ಮೆರವಣಿಗೆ ಜಿಲ್ಲಾಡಳಿತ ಭವನದಿಂದ ಪ್ರಾರಂಭವಾಗಿ ನಗರದ ನಾನಾ ಕಡೆ ಸಂಚರಿಸಿ ಡಾ.ಬಿ.ಆರ್.ಅಂಬೇಡ್ಕರ ಭವನಕ್ಕೆ ಮುಕ್ತಾಯಗೊಂಡಿತು. ಮೆರವಣಿಗೆಯಲ್ಲಿ ವಿವಿಧ ಜಾನಪದ ಕಲಾತಂಡಗಳು ಪಾಲ್ಗೊಂಡಿದ್ದವು.

ಎಸ್‌ಪಿ ಪವನ್ ನೆಜ್ಜೂರ್ ಅಮಾನತಿಗೆ ಗೃಹ ಸಚಿವ ಪರಮೇಶ್ವರ ನೀಡಿದ ಕಾರಣವಿದು



ತುಮಕೂರು,ಜ.03-

ಗಲಭೆ ನಡೆದ ಸ್ಥಳಕ್ಕೆ ಹೋಗಿ ನಿಯಂತ್ರಿಸದ, ಸಿಬ್ಬಂದಿಗೆ ನಿರ್ದೇಶನ ನೀಡಿ, ಸರಿಯಾದ ನಿರ್ಧಾರ ತೆಗೆದುಕೊಳ್ಳದ ಬಳ್ಳಾರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪವನ್ ನೆಜ್ಜೂರ್ ಅವರನ್ನು ಅನಿವಾರ್ಯವಾಗಿ ಅಮಾನತು ಮಾಡಬೇಕಾಯಿತು ಎಂದು ಗೃಹ ಸಚಿವ ಜಿ.ಪರಮೇಶ್ವರ ಸ್ಪಷ್ಟಪಡಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ಪೊಲೀಸ್ ವರಿಷ್ಠಾಧಿಕಾರಿ ಸ್ಥಳಕ್ಕೆ ಹೋಗಿ, ತಮ್ಮ ಸಿಬ್ಬಂದಿಗೆ ನಿರ್ದೇಶನ ಕೊಟ್ಟು ಗಲಭೆ ನಿಯಂತ್ರಿಸಬೇಕಿತ್ತು. ಒಂದು ಘಟನೆ ಸಂಭವಿಸಿದ ತಕ್ಷಣ ಪರಿಸ್ಥಿತಿಯನ್ನು ಹೇಗೆ ನಿಯಂತ್ರಿಸಬೇಕು ಎಂಬುದು ಗೊತ್ತಿ ರುತ್ತದೆ. ಪರೀಕ್ಷೆ ಪಾಸಾದ ನಂತರ ಇಂತಹ ಸನ್ನಿವೇಶಗಳನ್ನು ನಿಭಾಯಿ ಸುವ ಬಗ್ಗೆ ತರಬೇತಿ ಕೊಟ್ಟಿರುತ್ತಾರೆ. ಇಷ್ಟು ವರ್ಷ ಕೆಲಸ ಮಾಡಿದ ಅನುಭವ ಇರುತ್ತದೆ. ಇದೆಲ್ಲವನ್ನೂ ಯೋಚಿಸಿಯೇ ಜಿಲ್ಲೆಗೆ ನೇಮಕ ಮಾಡಲಾಗುತ್ತದೆ. ಆದರೆ ಸರಿಯಾಗಿ ಕರ್ತವ್ಯ ನಿರ್ವಹಿಸಿಲ್ಲ ಎಂದರು.

ಕರ್ತವ್ಯಕ್ಕೆ ಯಾವ ಸಮಯದಲ್ಲೇ ರಿಪೋರ್ಟ್ ಮಾಡಿಕೊಳ್ಳಲಿ. ಒಂದು ದಿನ, ಒಂದು ಗಂಟೆ ಎಂಬು ದು ಮುಖ್ಯವಲ್ಲ. ಕೆಲಸ ಎಂದ ಮೇಲೆ ಕೆಲಸ. ಅವರೇನೂ ಪೊಲೀಸ್ ಇಲಾಖೆಗೆ ಹೊಸಬರಲ್ಲ. ಜವಾಬ್ದಾರಿ ವಹಿಸಿಕೊಂಡ ತಕ್ಷಣ ಸವಾಲುಗಳು ಎದುರಾಗುತ್ತವೆ. ತಕ್ಷಣ ಕಾರ್ಯ ಪ್ರವೃತ್ತರಾಗಬೇಕಾಗುತ್ತದೆ. ಈ ಘಟನೆಯಲ್ಲೂ ತಕ್ಷಣ ಸ್ಥಳಕ್ಕೆ ಹೋಗಿ ಗುಂಪು ನಿಯಂತ್ರಿಸಿದ್ದರೆ ಪರಿಸ್ಥಿತಿ ಗುಂಡು ಹಾರಿಸುವ ಹಂತಕ್ಕೆ ಹೋಗುತ್ತಿರಲಿಲ್ಲ. ಸರಿಯಾಗಿ ಜವಾಬ್ದಾರಿ ನಿರ್ವಹಿಸದ ಕಾರಣಕ್ಕೆ ಅಮಾನತು ಮಾಡಲಾಗಿದೆ ಎಂದು ತಿಳಿಸಿದರು.

ಎಲ್ಲರೊಂದಿಗೆ ಪ್ರೀತಿ ಮಮತೆ ಶಾಂತಿ ಸಹೋದರತೆದಿಂದ ಬಾಳುವುದೇ ಇಸ್ಲಾಂ ಧರ್ಮ ಅಜೀಜುಲ್ಲಾ ಖಾದ್ರಿ ಸಾಹಬ್

ಸಿರುಗುಪ್ಪ - ಜಾಗತಿಕವಾಗಿ ಅರಬ್ ಪ್ರಬಲ ಅಲ್ಲಾಹನ ನಬಿಯೇ ಕರೀಮ್ ಸೊಲೆಲ್ಲಾಹು ಅಲೈಹಿವ ಸಲ್ಲಂ ಅವರ ಹಜರತ್ ಬೀಬೀ ಫಾತೀಮಾ ಹಜರತ್ ಅಲಿ ಇಮಾಮೆ ಹಸೈನ್ ಹುಸೈನ್ ರವರ ಕುಟುಂಬದ ತಾಯಿಯ ಕಡೆ ಇಂದ ಇಮಾಮೆ ಜಾಫರ್ ಅವರು ಮೊದಲ ಖಲೀಫಾ ಅಬೂಬಕರ್ ವಂಶಸ್ಥರು ಆಗಿದ್ದರು ಎಂದು ತೆಲಂಗಾಣ ರಾಜ್ಯದ ಹೈದರಾಬಾದ್ ಗುರುಗಳಾದ ಅಲ್ಲಾಮಾ ಮೌಲಾನಾ ಮುಫ್ತಿ ಸಾಬಿಕ್ ಶೇಖುಲ್ ಜಾಮಿಯಾ ನಿಜಾಮಿಯಾದ ಹಜರತ್ ಸೈಯದ್ ಶಾ ಅಜೀಜುಲ್ಲಾ ಖಾದ್ರಿ, ಸಾಹಬ್ ಅವರು ಹೇಳಿದರು ಸಿರುಗುಪ್ಪ ನಗರದ ಆದೋನಿ ರಸ್ತೆ ಜಾಮಾ ನಿಜಾಮಿಯಾ ಮಸ್ಜಿದ್ ನಲ್ಲಿ ಆಯೋಜಿಸಿದ ಮಹಫಿಲೇ ಜಲ್ ಸಾ ಜಶ್ನೇ ಇಮಾಮೆ ಜಾಫರ್ ಸಾಧಿಕ್ ರಜೀ ಅಲ್ಲಾಹು ಅನ್ ಹು ರವರ ಮುಖ್ಯಅತಿಥಿಗಳಾಗಿ ಸರ್ವರನ್ನು ಉದ್ದೇಶಿಸಿ ಮಾತನಾಡುತ್ತಾ ಜಾಗತಿಕವಾಗಿ ಇಸ್ಲಾಂ ಧರ್ಮ ಯಾವ ಧರ್ಮದವರನ್ನು ವಿರೋಧಿಸದೇ ಎಲ್ಲರೊಂದಿಗೆ ಪ್ರೀತಿ ಶಾಂತಿ ಮಮತೆ ಸಹೋದರತೆಯಿಂದ ಬಾಳುವುದೇ ಮೂಲ ಉದ್ದೇಶ ಮುಸ್ಲಿಂ ಬಾಂಧವರು ಹಿರಿಯರ ಮಾರ್ಗದರ್ಶನದಲ್ಲಿ ಸಲ್ಲಿಸುತ್ತಿರುವ ಸೇವೆ ಶ್ಲಾಘನಿಯ ಎಂದು ಕರೆ ನೀಡಿದರು ಸಿರುಗುಪ್ಪ ನಗರದ ಹಾಜಿ ಮಸ್ಜಿದ್ ಇಮಾಮೊ ಖತೀಬ್ ರಾಯಚೂರು ಜಿಲ್ಲೆ ಸಿಂಧನೂರು ತಾಲೂಕು ಮುಕ್ಕುಂದ ಹಜರತ್ ಗಡ್ಡೆ ಸೈಯದ್ ಶಾ ಖಾದರ್ ಬಾಷಾ ಖಾದ್ರಿ, ರ. ಅ ಬಗ್ದಾದಿ ಸಜ್ಜಾದ ನಶೀನ್ ಹಜರತ್ ಸೈಯದ್ ಶಾ ಹಸನ್ ಬಸ್ರಿ ಖಾದ್ರಿ, ಸಾಹೇಬ್ ಬಗ್ದಾದಿ ಅವರು ಕಾರ್ಯಕ್ರಮದ ಘನ ಅಧ್ಯಕ್ಷತೆ ಸಾನಿಧ್ಯ ವಹಿಸಿ ಇಮಾಮೆ ಜಾಫರ್ ಸಾಧಿಕ್ ಅವರ ಕುರಿತು ಮಾತನಾಡಿ ದುವಾ ಆಶೀರ್ವಚನ ನೀಡಿದರು ನವ ದೆಹಲಿಯ ಹಜರತ್ ಖ್ವಾಜಾ ನಿಜಾಮುದ್ದೀನ್ ಮೊಹಮ್ಮದ್ ಔಲಿಯಾ ಮೆಹೆಬೂಬೇ ಇಲಾಹಿ ರ. ಅ ದರ್ಗಾದ ಆಂಧ್ರಪ್ರದೇಶ ಕರ್ನೂಲ್ ಜಿಲ್ಲೆ ಆದೋನಿ ನಗರದ ಖಲೀಫಾ ಹಜರತ್ ಖಾಲೀದ್ ನಿಜಾಮಿ ಅವರ ಸಮ್ಮುಖದಲ್ಲಿ ಸೈಯದ್ ಶಾ ಮೆಹಬೂಬ್ ಪೀರ್ ಖಾದ್ರಿ ಬಗ್ದಾದಿ ಶಾಹಿ ಜಾಮಿಯಾ ಮಜೀದ್ ಖತೀಬೊ ಇಮಾಮ್ ಹಾಜಿ ಜಿ ರುಕುಮುದ್ದೀನ್ ಸಾಹೇಬ್ ಸೌದಾಗರ್ ಜುಮ್ಮಾ ಸುನ್ನಿ ಮಸೀದಿಯ ಮೌಲಾನ ಹಾಜಿ ಎಸ್ ಅಬ್ದುಲ್ ಸಮದ್ ನಿಜಾಮಿ ಖಲೀಫಾ ಗುಲ್ಬರ್ಗ ಖಾಜಾ ಬಂದಾನವಾಜಿ ಜಾಮಾ ನಿಜಾಮಿಯ ಮಸೀದಿಯ ಇಮಾಮೊ ಖತೀಬ್ ಅಬ್ದುಲ್ಲಾ ವಲ್ಲೂರ್ ಮಸೀದಿಯ ಖತೀಬೊ ಇಮಾಮ್ ಹಾಫೀಜೊ ಖಾರಿ ಮೊಹಮ್ಮದ್ ದವೂದ್ ಸಾಹಬ್ ಅವರು ಖುರಾನ್ ಖೀರತ್ ಓದಿದರು ಲಾಡ್ ಖಾನ್ ಮಸೀದಿ ಖತೀಬೊ ಇಮಾಮ್ ಸೈಯದ್ ಮೊಹಮ್ಮದ್ ಇರ್ಫಾನ್ ಬೀಬೀ ಹಾಜೀರ ಮಸೀದಿ ಮೌಲಾನ ಹಾಫೀಜ್ ಮೊಹಮ್ಮದ್ ದಾದಾ ಹಯಾತ್ ಖಲಂದರ್ ಸಾಹೇಬ್ ಹಮ್ ದೋಸನಾ ಹೇಳಿದರು.

ದಲಿತಪರ ಸಂಘಟನೆಗಳಿಂದ ಭೀಮಾ ಕೋರೆಗಾಂವ್ ವಿಜಯೋತ್ಸವ ಆಚರಣೆ



ಸಿರುಗುಪ್ಪ ,ಜ.03-

ನಗರದ ತಾಲೂಕು ಕ್ರೀಡಾಂಗಣದಿಂದ ವಿವಿಧ ದಲಿತಪರ ಸಂಘಟನೆಗಳಿಂದ ನಡೆದ ಭೀಮಾ ಕೋರೆಗಾಂವ್ ವಿಜಯೋತ್ಸವದ ಬೃಹತ್ ಮೆರವಣಿಗೆಗೆ ವಾಲ್ಮೀಕಿ ವಿದ್ಯಾಭಿವೃದ್ದಿ ಟ್ರಸ್ಟಿನ ತಾಲೂಕಾಧ್ಯಕ್ಷ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಸರ್ವಧರ್ಮೀಯ ಸಂಘಟನೆಯ ಗೌರವಾಧ್ಯಕ್ಷ ಬಿ.ಎಮ್.ಸತೀಶ್ ಅವರು ಚಾಲನೆ ನೀಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಸರ್ವಧರ್ಮೀಯ ಸಂಘಟನೆಯ ಅಧ್ಯಕ್ಷ ಡಾ.ಕೊಡ್ಲೆ ಮಲ್ಲಿಕಾರ್ಜುನ ಅವರು ಮಾತನಾಡಿ ಅಂದಿನ ಪೇಶ್ವೆಗಳ ಆಡಳಿತದಲ್ಲಿದ್ದ ಜಾತಿಪದ್ಧತಿ, ಅಸ್ಪಶ್ಯತೆ, ಮೇಲು ಕೀಳುಗಳ ವಿರುದ್ದ ನಿಂತು ಮಾನವೀಯ ಮೌಲ್ಯಗಳನ್ನು ಪಡೆದುಕೊಳ್ಳಲು ಪೇಶ್ವೆಗಳ 30 ಸಾವಿರ ಸೈನಿಕರ ಮೇಲೆ 500 ಜನ ಮಹರ್ ಸೈನಿಕರು ಧೈರ್ಯ ಮತ್ತು ಕೆಚ್ಚೆದೆಯಿಂದ ಯುದ್ದ ಮಾಡಿ ವಿಜಯ ಹೊಂದಿದ ಸಂಕೇತವಾಗಿ ಪ್ರತಿವರ್ಷ ಭೀಮಾ ಕೋರೆಗಾಂವ್ ಆಚರಿಸುತ್ತಾ ಬರಲಾಗಿದೆಂದರು.

ಡಾ.ಬಿ.ಆರ್.ಅಂಬೇಡ್ಕರ್ ಸಂಘದ ತಾಲೂಕಾಧ್ಯಕ್ಷ ಚಿಕ್ಕಬಳ್ಳಾರಿ ನಾಗಪ್ಪ ಅವರು ಮಾತನಾಡಿ ಪೇಶ್ವೆಗಳ ವಿರುದ್ದ ಹೋರಾಡಿ ವಿಜಯ ಸಾಧಿಸಿದ 500 ಸೈನಿಕರ ಪೈಕಿ 22 ಸೈನಿಕರು ಮರಣ ಹೊಂದುತ್ತಾರೆ. ಆ ನೆನಪಿಗಾಗಿ ಭೀಮಾನದಿ ತೀರದಲ್ಲಿ ವಿಜಯ ಸ್ಥಂಭವನ್ನು ಸ್ಥಾಪಿಸಲಾಗಿದೆ.

ವಿಜಯ ಸ್ಥಂಭದ ಮಾದರಿಯ ಮೆರವಣಿಗೆಯಲ್ಲಿ ತಾಲೂಕಿನ ಸುತ್ತಮುತ್ತಲಿನ ಗ್ರಾಮದಿಂದಲೂ ನಮ್ಮೆಲ್ಲಾ ದಲಿತಪರ ಸಂಘಟನೆಗಳ ಪದಾಧಿಕಾರಿಗಳು ಭಾಗಿಯಾಗಿ ಕಾರ್ಯಕ್ರಮ ಯಶಸ್ವಿಗೊಳಿಸಿದ್ದಾರೆ ಎಂದು ತಿಳಿಸಿದರು.

ತಾಲೂಕು ಕ್ರೀಡಾಂಗಣದಿಂದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರರ ವೃತ್ತದವರೆಗೆ ರಾಜಬೀದಿಯಲ್ಲಿ ಮೆರವಣಿಗೆ ಸಾಗಿದ ಮೆರವಣಿಗೆಯಲ್ಲಿ ನೀಲಿ ಬಾವುಟಗಳನ್ನು ಹಿಡಿದು ಯುವಕರು ಕುಣಿದು ಸಂಭ್ರಮಿಸಿದರು. ಇದೇ ವೇಳೆ ದಲಿತಪರ ಸಂಘಟನೆಗಳ ಮುಖಂಡರಾದ ವೀರೇಶ, ಹೆಚ್.ಗಣೇಶ, ದರಗಪ್ಪ, ಸೇರಿದಂತೆ ಇನ್ನಿತರ ಪದಾಧಿಕಾರಿಗಳು ಇದ್ದರು.

ಜಿಲ್ಲೆಯಲ್ಲಿ 4.11 ಲಕ್ಷ ಗೃಹಲಕ್ಷ್ಮೀ ಯೋಜನೆ ಫಲಾನುಭವಿಗಳು

ಬಾಗಲಕೋಟೆ ,ಜ.03-

ಸರಕಾರದ ಮಹತ್ವಾಕಾಂಕ್ಷಿ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮೀ ಯೋಜನೆಯಡಿ ಜಿಲ್ಲೆಯಲ್ಲಿ 4,11,582 ಫಲಾನುಭವಿಗಳು ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಜಿಲ್ಲಾ ಅಧ್ಯಕ್ಷ ಅನೀಲಕುಮಾರ ದಡ್ಡಿ ಹೇಳಿದ್ದಾರೆ.

ಈ ಕುರಿತು ಪ್ರಕಟಣೆಯಲ್ಲಿ ತಿಳಿಸಿದ ಅವರು ಸರಕಾರ ಮಹಿಳೆಯರು ಆರ್ಥಿಕವಾಗಿ ಸಬಲೀಕರಣ ಹೊಂದುವಂತೆ ಮಾಡುವ ನಿಟ್ಟಿನಲ್ಲಿ ರಾಜ್ಯ ಸರಕಾರ ಕುಟುಂಬದ ಯಜಮಾನಿಗೆ ಪ್ರತಿ ತಿಂಗಳು ಮಾಹೆಯಾನ 2000 ರೂ.ಗಳನ್ನು ನೀಡುವ ಗೃಹಲಕ್ಷ್ಮೀ ಯೋಜನೆಯನ್ನು 2023, ಜೂನ್ 6 ರಂದು ಜಾರಿಗೆ ತಂದಿದೆ. ಪ್ರಾರಂಭದಲ್ಲಿ ಆಗಸ್ಟ-2023ರ ಮೋಹೆಯಲ್ಲಿ 3,58,285 ಫಲಾನುಭವಿಗಳು ಇದ್ದರು. ಈಗ ಸೆಪ್ಟೆಂಬರ 2025ಕ್ಕೆ 4,11,582 ಫಲಾನುಭವಿಗಳಾಗಿದ್ದಾರೆ. ಸೆಪ್ಟಂಬರ-2025ರ ಮಾಹೆಯ ಒಟ್ಟು 82.31 ಕೋಟಿ ರೂ.ಗಳನ್ನು ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಡಿಬಿಟಿ ಮೂಲಕ ಜಮೆ ಆಗಿರುತ್ತದೆ ಎಂದು ತಿಳಿಸಿದ್ದಾರೆ.

ಗೃಹಲಕ್ಷ್ಮೀ ಯೋಜನೆ ಪ್ರಾರಂಭದಿಂದ ಇಲ್ಲಿಯವರೆಗೆ ಬಾಗಲಕೋಟೆ ಜಿಲ್ಲೆಗೆ 24 ಕಂತುಗಳಲ್ಲಿ 1901.23 ಕೋಟಿ ರೂ.ಗಳಷ್ಟು ಅನುದಾನ ಬಿಡುಗಡೆಯಾಗಿರುತ್ತದೆ. ಫೆಬ್ರವರಿ ಮತ್ತು ಮಾರ್ಚ-2025ರ ಮಾಹೆಯ ಹಣ ತಾಂತ್ರಿಕ ಕಾರಣಗಳಿಂದ ಜಮೆ ಆಗಿರುವುದಿಲ್ಲ. ಬಿಡುಗಡೆಯಾದರೆ ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮೆ ಆಗುತ್ತದೆ. ಈ ಬಗ್ಗೆ ಆತಂಕ ಪಡುವ ಅಗತ್ಯವಿಲ್ಲವೆಂದು ತಿಳಿಸಿದ್ದಾರೆ.

ಗೃಹಲಕ್ಷ್ಮೀ ಯೋಜನೆಯಡಿ ಫಲಾನುಭವಿಗಳು ಎದುರಿಸುತ್ತಿರುವ ಐಟಿ, ಜಿಎಸ್‌ಟಿ ಸಮಸ್ಯೆಯನ್ನು ಫಲಾನುಭವಿಗಳು ತಾವು ತೆರಿಗೆ ಪಾವತಿದಾರರು ಇಲ್ಲವೆಂಬ ಹಿಂಬರಹವನ್ನು ಸಂಬಂಧಪಟ್ಟ ಇಲಾಖೆಯಿಂದ ಪಡೆದು ಮಾಹಿತಿಯನ್ನು ಕಚೇರಿಗಳಿಗೆ ಸಲ್ಲಿಸಿರುತ್ತಿರಿ. ಈ ಕುರಿತು ಪ್ರಧಾನ ಕಚೇರಿಯ ಹಂತದಲ್ಲಿ ಪರಿಶೀಲನೆಗೆ ಒಲಪಡುತ್ತದೆ. ಪರಿಶೀಲನೆ ನಂತರ ಸಮಸ್ಯೆಗಳು ಬಗೆಹರಿಯಲಿವೆ. ಗೃಹಲಕ್ಷ್ಮೀ ಯೋಜನೆಗೆ ಸಂಬಂಧಿಸಿದಂತೆ ಸಹಾಯವಾಣಿ ಸ್ಥಾಪಿಸಲಾಗಿದ್ದು, ಸಹಾಯವಾಣಿ ಸಂಖ್ಯೆ 181 ಕ್ಕೆ ಕರೆ ಮಾಡಿ ಮಾಹಿತಿ ಪಡೆದುಕೊಳ್ಳಬಹುದಾಗಿದೆ ಎಂದು ತಿಳಿಸಿದ್ದಾರೆ.

ನಿಮ್ಮೂರು ಸುದ್ದಿ

ಸಂಪಾದಕೀಯ

ಮಾದಕ ವಸ್ತು ಉತ್ಪಾದನೆಗಿಳಿದ ಮಾಫಿಯಾ ಗ್ಯಾಂಗ್; ಕರ್ನಾಟಕಕ್ಕೆ ಕಳಂಕವಲ್ಲವೇ?



ದೇಶದ ಐಟಿ ರಾಜಧಾನಿಯನ್ನು ಮಹಾರಾಷ್ಟ್ರ, ರಾಜಸ್ಥಾನದ ಮಾಫಿಯಾ ಗ್ಯಾಂಗ್ ಡ್ರಗ್ಸ್ ಉತ್ಪಾದನೆಯ ಸುರಕ್ಷಿತ ತಾಣವನ್ನಾಗಿ ಮಾಡಿಕೊಂಡಿದ್ದು ಹೇಗೆ? ಕರ್ನಾಟಕ ಪೊಲೀಸರು ಇದಕ್ಕೆ ಉತ್ತರಿಸಬೇಕಿದೆ. ಇದರಲ್ಲಿ ಗೃಹ ಇಲಾಖೆಯ ವೈಫಲ್ಯ ಎದ್ದು ಕಾಣುತ್ತಿದೆ.

2025 ವರ್ಷಾಂತ್ಯದ ವೇಳೆಗೆ ಕರ್ನಾಟಕ ಕಳಂಕವೊಂದನ್ನು ಹೊತ್ತುಕೊಂಡಿದೆ. ಮಹಾರಾಷ್ಟ್ರದಲ್ಲಿ ಡ್ರಗ್ಸ್ ಪೆಡ್ಲರ್ ಗಳ ವಿಚಾರಣೆ ನಡೆಸುವಾಗ ಜಾಲದ ಬೇರುಗಳು ನೇರವಾಗಿ ಮೈಸೂರಿಗೆ ನೆಟ್ಟಿತ್ತು. ಕರ್ನಾಟಕದ ಸಾಂಸ್ಕೃತಿಕ ರಾಜಧಾನಿಗೆ ಮೊದಲ ಕಳಂಕ ಅಂಟಿತ್ತು. ಮಹಾರಾಷ್ಟ್ರ ಪೊಲೀಸರು ಮೈಸೂರು ಹೊರವಲಯದ ರಿಂಗ್ ರಸ್ತೆಯ ಬಳಿ ಇದ್ದ ಡ್ರಗ್ಸ್ ತಯಾರಕಾ ಘಟಕದ ಮೇಲೆ ದಿಢೀರ್ ದಾಳಿ ನಡೆಸಿದ್ದರು. ಈ ವೇಳೆ ಎಕ್ಸ್‌ಟಸಿ ಎಂದು ಕರೆಯಲಾಗುವ ಕೋಟ್ಯಂತರ ಬೆಲೆಯ ಎಂಡಿಎಂಎ () ಮಾದಕದ್ರವ್ಯವನ್ನು ವಶಕ್ಕೆ ಪಡೆದುಕೊಳ್ಳಲಾಗಿತ್ತು. ಇಲ್ಲಿಂದ ದೇಶ, ವಿದೇಶಕ್ಕೆ ಡ್ರಗ್ಸ್ ಪೂರೈಕೆ ಆಗುತ್ತಿತ್ತು. ಅದಾದ ನಂತರ ಮಹಾರಾಷ್ಟ್ರ ಮಾದಕ ವಸ್ತು ನಿಗ್ರಹ ಕಾರ್ಯಪಡೆ (ಎಎನ್‌ಟಿಎಫ್) ಕೊತ್ತನೂರು ಠಾಣೆ, ಬಾಗಲೂರು ಹಾಗೂ ಅವಲಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ದಾಳಿ ನಡೆಸಿದ್ದಾರೆ. ಒಟ್ಟು 55.88 ಕೋಟಿ ಮೌಲ್ಯದ ಡ್ರಗ್ಸ್ ವಶಕ್ಕೆ ಪಡೆದುಕೊಂಡಿದ್ದಾರೆ. ರಾಜಸ್ಥಾನ ಮೂಲದ ಉದ್ಯಮಿಗಳಾದ ಯೋಗಿರಾಜ್ ಕುಮ್ಹಾರ್, ನಯನ್ ಪವಾರ್ ಮತ್ತಿತರರು ಬೆಂಗಳೂರಿನಲ್ಲಿ ಡ್ರಗ್ಸ್ ತಯಾರಕಾ ಘಟಕ ನಡೆಸುತ್ತಿದ್ದರು. ಆರ್ ಜೆ ಇವೆಂಟ್ ಹೆಸರಿನಲ್ಲಿ ಡ್ರಗ್ಸ್ ಕಾರ್ಖಾನೆ ಪತ್ತೆಯಾಗಿದೆ. ದಾಳಿಯ ಸಂದರ್ಭದಲ್ಲಿ 4.1 ಕೆಜಿ ಘನರೂಪದ ಎಂಡಿಎಂಎ ಮತ್ತು 17 ಕೆಜಿ ದ್ರವರೂಪದ ಎಂಡಿಎಂಎ ಸೇರಿದಂತೆ ಒಟ್ಟು 21.4 ಕೆಜಿ ಡ್ರಗ್ಸ್ ವಶಕ್ಕೆ ಪಡೆದಿದ್ದರು.

ದೇಶದ ಐಟಿ ರಾಜಧಾನಿಯನ್ನು ಮಹಾರಾಷ್ಟ್ರ, ರಾಜಸ್ಥಾನದ ಮಾಫಿಯಾ ಗ್ಯಾಂಗ್ ಡ್ರಗ್ಸ್ ಉತ್ಪಾದನೆಯ ಸುರಕ್ಷಿತ ತಾಣವನ್ನಾಗಿ ಮಾಡಿಕೊಂಡಿದ್ದು ಹೇಗೆ? ಕರ್ನಾಟಕ ಪೊಲೀಸರು ಇದಕ್ಕೆ ಉತ್ತರಿಸಬೇಕಿದೆ. ಇದರಲ್ಲಿ ಗೃಹ ಇಲಾಖೆಯ ವೈಫಲ್ಯ ಎದ್ದು ಕಾಣುತ್ತಿದೆ.

ಬೆಂಗಳೂರು ಮಹಾನಗರ ಬಹುರಾಷ್ಟ್ರೀಯ ಕಂಪನಿಗಳ ತಾಣ. ದೇಶದ ನಾನಾ ಭಾಗಗಳ ಜನರು ಉದ್ಯೋಗ ಅರಸಿ ಬಂದು ಇಲ್ಲೇ ಮನೆ ಮಾಡಿಕೊಂಡು ವಾಸವಿದ್ದಾರೆ. ಬಂದು ಹೋಗುವ ಮಂದಿಯದ್ದು ಲೆಕ್ಕವೇ ಇಲ್ಲ. ಬೆಂಗಳೂರು ಮಹಾನಗರದ ಕೆಲ ನಿರ್ದಿಷ್ಟ ಪ್ರದೇಶಗಳಲ್ಲಿ ವಿದೇಶಿ ಪ್ರಜೆಗಳು ನೆಲೆಸಿದ್ದಾರೆ. ಮಾದಕ ವಸ್ತು ಸಾಗಾಟ ಮಾಡುವಾಗ ಸಿಕ್ಕಿ ಹಾಕಿಕೊಳ್ಳುವ ಬಹುತೇಕರು ವಿದೇಶಿಗರು. ನೈಜೀರಿಯಾ, ಆಫ್ರಿಕದ ಪ್ರಜೆಗಳು ಬೆಂಗಳೂರಿನ ರಸ್ತೆಗಳಲ್ಲಿ ಮಾದಕ ವಸ್ತು ಸೇವನೆ ಮಾಡಿ ಗಲಾಟೆ ಮಾಡಿಕೊಳ್ಳುವ ಘಟನೆಗಳು ಆಗಾಗ ಸುದ್ದಿಯಾಗುತ್ತಿವೆ. ಪ್ರತಿಷ್ಠಿತರ ಪಾರ್ಟಿಗಳಲ್ಲಿ ಡ್ರಗ್ಸ್ ಸೇವನೆ ಎಲ್ಲರಿಗೂ ಗೊತ್ತಿರುವ ಸಂಗತಿ. ಬಹುತೇಕ ಸಿನಿಮಾ ರಂಗದವರು, ಉದ್ಯಮಿಗಳು, ಹಣವಂತರು ಸೇರಿ ಮಾಡುವ ವೀಕೆಂಡ್ ರೇವ್ ಪಾರ್ಟಿಗಳಲ್ಲಿ ಎಗ್ಗಿಲ್ಲದೇ ಡ್ರಗ್ಸ್ ವಿತರಿಸಲಾಗುತ್ತದೆ. ಇವೆಲ್ಲ ದಶಕಗಳಿಂದ ನಡೆಯುತ್ತಿರುವ ವ್ಯವಹಾರ. ಆಗಾಗ ಪೊಲೀಸರು ದಾಳಿ ನಡೆಸಿ ಸುದ್ದಿ ಕೊಡುತ್ತಾರೆ ಅಷ್ಟೇ. ಆ ನಂತರ ಏನಾಯಿತು ಎಂಬುದು ಯಾರಿಗೂ ಗೊತ್ತಿಲ್ಲ. ಮಾದಕ ವಸ್ತು ಸಾಗಿಸುವಾಗ, ಸೇವನೆ ಮಾಡುವಾಗ ಸಿಕ್ಕಿ ಹಾಕಿಕೊಂಡ ಸುದ್ದಿಗಳು ಮಾಮೂಲಿಯಾಗಿತ್ತು. ಆದರೆ, ನಮ್ಮ ರಾಜ್ಯದಲ್ಲಿಯೇ ಉತ್ಪಾದನೆ ಮಾಡಿ ವಿದೇಶಕ್ಕೆ ಸಾಗಿಸಲಾಗುತ್ತಿದೆ ಎಂಬ ಸುದ್ದಿ ಮಾತ್ರ ಕರ್ನಾಟಕದ ಪಾಲಿಗೆ ಅಳಿಸಲಾಗದ ಕಪ್ಪು ಚುಕ್ಕೆ. ಮಹಾರಾಷ್ಟ್ರ ಪೊಲೀಸರು ಈ ಜಾಡನ್ನು ಭೇದಿಸಿರುವುದು ಕರ್ನಾಟಕ ಪೊಲೀಸರ ನೈತಿಕತೆ ಮತ್ತು ಕಾರ್ಯದಕ್ಷತೆಯ ಬಗ್ಗೆ ಅನುಮಾನ ಹುಟ್ಟು ಹಾಕಿದೆ. ಸ್ಥಳೀಯ ಪೊಲೀಸರ ಅರಿವಿಗೆ ಬಾರದೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಮಾದಕದ್ರವ್ಯಗಳ ತಯಾರಿಕೆ ಸಾಧ್ಯವೇ ಇಲ್ಲ. ಬೆಂಗಳೂರಿನ ಕೊತ್ತನೂರು, ಬಾಗಲೂರು ಹಾಗೂ ಅವಲಹಳ್ಳಿ ಪೊಲೀಸ್ ಠಾಣಾಧಿಕಾರಿಗಳನ್ನು ಅಮಾನತು ಮಾಡಲಾಗಿದೆ. ಇನ್ನೂ ಎಲ್ಲೆಲ್ಲ ಇಂತಹ ದಂಧೆಯ ಕೇಂದ್ರಗಳಿವೆ ಎಂಬುದನ್ನು ಪೊಲೀಸರು ಪತ್ತೆ ಹಚ್ಚಿ ಇಡೀ ಮಾಫಿಯಾವನ್ನು ಬೇರು ಸಹಿತ ಬಲಿ ಹಾಕಬೇಕಿದೆ. ಮೈಸೂರಿನಲ್ಲಿ ಗ್ಯಾರೇಜ್ ಎಂದು ಹೊರಗೆ ಬೋರ್ಡ್ ತಗುಲಿ ಹಾಕಿ ಒಳಗೆ ಡ್ರಗ್ಸ್ ತಯಾರಿಸಲಾಗುತ್ತಿತ್ತು. ಅಲ್ಲೇನು ನಡೆಯುತ್ತಿದೆ ಎಂಬ ಬಗ್ಗೆ ಪೊಲೀಸರಿಗೂ, ಸ್ಥಳೀಯರಿಗೂ ಅನುಮಾನ ಬರದಿರುವುದು ಸೋಜಿಗದ ಸಂಗತಿ.

ಯುವಸಮೂಹ, ಕಾಲೇಜು ವಿದ್ಯಾರ್ಥಿಗಳು ಡ್ರಗ್ಸ್ ಗೆ ಬಲಿಯಾಗುತ್ತಿರುವುದು ಬಹುದೊಡ್ಡ ಸಾಮಾಜಿಕ ದುರಂತ ಮಾತ್ರವಲ್ಲದೆ, ಕಾನೂನು ಸುವ್ಯವಸ್ಥೆಗೆ ತಗುಲಿದ ಕಳಂಕ ಎಂದು ನಮ್ಮ ಸರ್ಕಾರಗಳು, ವ್ಯವಸ್ಥೆ ಇನ್ನೂ ಅರ್ಥ ಮಾಡಿಕೊಂಡಂತಿಲ್ಲ. ಮಕ್ಕಳಿಗೆ ಡ್ರಗ್ಸ್ ಚಟ ಹತ್ತಿಸುವುದು, ನಂತರ ಅವರನ್ನೇ ಪೆಡ್ಲರ್‌ಗಳ ರೀತಿಯಲ್ಲಿ ಬಳಸಿಕೊಳ್ಳುವುದು, ಕೇಕ್, ಜ್ಯೂಸ್‌ಗಳಲ್ಲಿ, ಐಸ್ ಕ್ರೀಮ್ ಗಳಲ್ಲಿ ಮಾದಕ ವಸ್ತು ಬೆರೆಸಿ ಅಮಾಯಕ ಮಕ್ಕಳನ್ನು, ಯುವ ಸಮುದಾಯವನ್ನು ಅಪಾಯಕಾರಿ ಮಾದಕ ವ್ಯಸನಕ್ಕೆ ದೂಡಲಾಗುತ್ತಿದೆ. ಇದೊಂದು ಸಾಮಾಜಿಕ ಪಿಡುಗು ಎಂದು ಸರ್ಕಾರ ವರ್ಷಕ್ಕೊಮ್ಮೆ ಮಾದಕ ವಸ್ತು ವಿರುದ್ಧ ಅಭಿಯಾನ ನಡೆಸಿ ಕೈ ತೊಳೆದುಕೊಂಡು ಪುನಃ ಗಾಢ ನಿದ್ದೆಗೆ ಜಾರುತ್ತಿದೆ. ಜಾಗೃತಿ ಕಾರ್ಯಕ್ರಮಗಳು ಯಾಂತ್ರಿಕವಾಗಿ ನಡೆಯುತ್ತಿದೆ. ಕಾನೂನು ಬಾಹಿರ ಕೃತ್ಯಗಳಲ್ಲಿ, ದಂಧೆಗಳಲ್ಲಿ ಭಾಗಿಯಾದವರ ಹೆಡೆಮುರಿ ಕಟ್ಟಬೇಕಿರುವ ಪೊಲೀಸರೇ ಡ್ರಗ್ಸ್ ಮಾಫಿಯಾ ಜೊತೆಗೆ ಕೈ ಜೋಡಿಸಿದ್ದಾರೆ ಎಂಬ ಅನುಮಾನ ಸಾರ್ವಜನಿಕ ವಲಯದಲ್ಲಿ ಮೂಡಿದರೆ ಅಚ್ಚರಿಯಿಲ್ಲ.

ಪೊಲೀಸರ ಕಣ್ತಪ್ಪಿಸಿ ಇಷ್ಟೊಂದು ರಾಜಾರೋಷವಾಗಿ ಮಾದಕ ವಸ್ತು ಉತ್ಪಾದನೆಗಿಳಿದ ಭಂಡ ಧೈರ್ಯದ ಹಿಂದೆ ಯಾವ್ಯಾವ ಭಾರೀ ತಿಮಿಂಗಿಲಗಳಿವೆ ಎಂಬುದು ತನಿಖೆಯಾಗಬೇಕಿದೆ. ರಾಜಕಾರಣಿಗಳೇ, ಅಧಿಕಾರಿಗಳೇ, ಪೊಲೀಸರೇ ಯಾರು ಈ ದುಷ್ಟರ ಕೂಟಕ್ಕೆ ಬೆನ್ನೆಲುಬಾಗಿದ್ದಾರೆ ಎಂಬುದು ಪತ್ತೆಯಾದರೆ ಮಾಫಿಯಾದ ಬೇರುಗಳನ್ನು ಕಿತ್ತೆಸೆಯಲು ಸಾಧ್ಯ. ಪೊಲೀಸರು ಆ ಕೆಲಸ ಮಾಡುವರೇ? ಭಾವೀ ಜನಾಂಗವನ್ನು ಮಾದಕದ್ರವ್ಯ ವ್ಯಸನದ ಜೀವಂತ ಮರಣದ ಕತ್ತಲ ಕೂಪಕ್ಕೆ ತಳ್ಳಿ ಸೊಕ್ಕಿರುವ ಈ ಬೆಕ್ಕುಗಳಿಗೆ ಗಂಟೆ ಕಟ್ಟುವ ದಿಟ್ಟತನವನ್ನು ಸಿದ್ದರಾಮಯ್ಯ ಸರ್ಕಾರ ತೋರುವುದೇ, ಇಲ್ಲವೇ ಕೈ ಕಟ್ಟಿ ಬಾಯಿ ಮುಚ್ಚಿ ಕುಳಿತುಕೊಳ್ಳುವುದೇ?

ಬೆಂಗಳೂರು ನಗರದಲ್ಲಿ 2024ರಲ್ಲಿ ಎನ್ ಡಿ ಪಿ ಎಸ್ ಕಾಯ್ದೆ ಅಡಿಯಲ್ಲಿ 520 ಪ್ರಕರಣಗಳು ದಾಖಲಾಗಿವೆ. 2025ರಲ್ಲಿ ಗಾಂಜಾ ಮತ್ತು ಸಿಂಥೆಟಿಕ್ ಡ್ರಗ್ಸ್ ಮಾರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ 1099 ಪ್ರಕರಣ ದಾಖಲಾಗಿದೆ. ಅಂದ್ರೆ, ಒಂದು ವರ್ಷದಲ್ಲಿ ಪ್ರಕರಣಗಳ ಸಂಖ್ಯೆ ಎರಡು ಪಟ್ಟು ಹೆಚ್ಚಾಗಿದೆ. ಹಾಗಿದ್ದರೆ ಪೊಲೀಸರು, ಕಾನೂನಿನ ಭಯ ಇಲ್ಲ ಎಂಬುದು ಸ್ಪಷ್ಟ. ಡ್ರಗ್ಸ್ ಜಾಲಕ್ಕೆ ಬಿದ್ದು ಅನೇಕ ಯುವಕರು, ಯುವತಿಯರು ತಮ್ಮ ಬದುಕನ್ನೇ ಅಂತ್ಯಗೊಳಿಸಿಕೊಂಡಿದ್ದಾರೆ, ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದಾರೆ. ಇಂತಹ ಸಮಯದಲ್ಲಿ ಮಾದಕ ವಸ್ತು ಸುಲಭದಲ್ಲಿ ಯುವಜನರ ಕೈಗೆ ಸಿಗದಂತೆ ಮಾಡುವುದು ಮೊದಲ ಆದ್ಯತೆಯಾಗಬೇಕಿತ್ತು. ಈಗ ನೋಡಿದರೆ ನಮ್ಮ ರಾಜ್ಯದಲ್ಲಿಯೇ ಉತ್ಪಾದನೆಯೂ ಆಗುತ್ತಿದೆ. ಇಂತಹ ಅದೆಷ್ಟು ಜಾಗಗಳಿವೆಯೋ ಗೊತ್ತಿಲ್ಲ.

ಇತ್ತೀಚೆಗೆ ನಡೆದ ವಿಧಾನಮಂಡಲದ ಬೆಳಗಾವಿ ಅಧಿವೇಶನದಲ್ಲಿ ಗೃಹಸಚಿವ ಡಾ.ಜಿ. ಪರಮೇಶ್ವರ ಅವರು ಮಾದಕ ವಸ್ತುಗಳ ಮಾರಾಟದ ವಿರುದ್ಧ ಅತ್ಯಂತ ಕಠಿಣ ಕ್ರಮದ ಮಾತಾಡಿದ್ದರು. ಮಾದಕ ವಸ್ತುಗಳ ಮಾರಾಟ ಮಾಡುವವರ ಮನೆಗಳ ಮೇಲೆ ಬುಲ್ಡೋಜರ್ ಹತ್ತಿಸಿ ಅವುಗಳನ್ನು ಕೆಡವಲು ಸಿದ್ಧವಿದೆ. ಇಂತಹ ಕೃತ್ಯಗಳಲ್ಲಿ ಪೊಲೀಸರು ಭಾಗಿಯಾಗಿರುವುದು ಕಂಡುಬಂದರೆ, ಸರ್ಕಾರ ಅವರನ್ನು ಸೇವೆಯಿಂದ ವಜಾಗೊಳಿಸುವುದಲ್ಲದೆ, ಅವರ ಮೇಲೆ ಆರೋಪ ಹೊರಿಸಿ ಕಠಿಣ ಕ್ರಮ ಕೈಗೊಳ್ಳುತ್ತೇವೆ ಎಂದೆಲ್ಲ ಹೇಳಿದ್ದರು.

ಬಹಳಷ್ಟು ವಿದೇಶಿ ಪ್ರಜೆಗಳು, ಅವರಲ್ಲಿ ಹಲವರು ಆಫ್ರಿಕನ್ ದೇಶಗಳಿಂದ ಬಂದವರು, ಮಾದಕ ವಸ್ತು ಕಳ್ಳಸಾಗಣೆ ಮತ್ತು ಮಾರಾಟದಲ್ಲಿ ಸಿಕ್ಕಿಬಿದ್ದಿದ್ದಾರೆ. ಅವರು ಅದನ್ನು ಹೇಗೆ ತರುತ್ತಾರೆ ಅಥವಾ ಪೂರೈಸುತ್ತಾರೆ ಎಂಬುದು ನಮಗೆ ತಿಳಿದಿಲ್ಲ. ನಾವು ಅವರ ಚಲನವಲನಗಳನ್ನು ಮೇಲ್ವಿಚಾರಣೆ ಮಾಡುತ್ತಿದ್ದೇವೆ ಮತ್ತು ಈ ಜನರಿಗೆ ಮನೆಗಳನ್ನು ಬಾಡಿಗೆಗೆ ನೀಡಿರುವ ಮನೆ ಮಾಲೀಕರನ್ನು ಸಹ ಗುರುತಿಸಿದ್ದೇವೆ. ಮಾದಕ ವಸ್ತು ಮಾರಾಟಗಾರರು ಬಾಡಿಗೆಗೆ ವಾಸಿಸುವ ಮನೆಗಳನ್ನು ಸಹ ನಾವು ಕೆಡವಲು ಸಿದ್ಧರಿದ್ದೇವೆ ಎಂದು ಸಾರಿ ಹೇಳಿದ್ದರು.

ಆದರೆ, ವಿದೇಶೀ ಪ್ರಜೆಗಳ ಮೇಲೆ ಮಾತ್ರವೇ ದೋಷ ಹೊರಿಸಿ ಪಾರಾಗುವ ಪರಿಸ್ಥಿತಿಯಿಲ್ಲವೆಂದು ಮಹಾರಾಷ್ಟ್ರದ ಪೊಲೀಸ್ ಕಾರ್ಯಾಚರಣೆ ತೋರಿಸಿಕೊಟ್ಟಿದೆ. ರಾಜಸ್ಥಾನಿ ಮೂಲದ ಉದ್ಯಮಿಗಳು ಡ್ರಗ್ಸ್ ಉತ್ಪಾದನೆಯಲ್ಲಿ ತೊಡಗಿರುವುದು ಪತ್ತೆಯಾಗಿದೆ. ಬುಲ್ಡೋಜರ್ ಕಾರ್ಯಾಚರಣೆ ಕಾನೂನುಬಾಹಿರ ಕ್ರಮದ ಮಾತಾಡಿ ದೇಶಾದ್ಯಂತ ವಿವಾದಕ್ಕೆ ಸಿಲುಕಿದ್ದರು ಡಾ.ಪರಮೇಶ್ವರ. ಡ್ರಗ್ಸ್ ಮಾರಾಟ ಬಿಡಿ, ಡ್ರಗ್ಸ್ ತಯಾರಿಕೆಯಂತಹ ಮನೆಮುರುಕ ಕೆಲಸಕ್ಕೆ ಕೈ ಹಾಕಿರುವವರು ಮತ್ತು ಅವರ ಕುರಿತು ಕುರುಡುಗಣ್ಣು ಹರಿಸಿರುವ ಪೊಲೀಸರ ವಿರುದ್ಧ ಯಾವ ಕಠಿಣ ಕ್ರಮ ಕೈಗೊಂಡಿದ್ದಾರೆಂದು ರಾಜ್ಯದ ಪ್ರಜೆಗಳಿಗೆ ಸಮಜಾಯಿಷಿ ಒದಗಿಸಬೇಕಿದೆ.

ಸ್ಮರಣೆಯೊಂದೇ ಸಾಕೇ? ಸಾಕಾರವಾಗಬೇಕಿದೆ ಅವರ ಕನಸು



ದಲಿತ ಮಹಿಳೆ ತಯಾರಿಸಿದ ಬಿಸಿಯೂಟ ಉಣಲೊಲ್ಲೆ ಎನುವ ಮಕ್ಕಳನ್ನು ಮನವೊಲಿಸಿ ಜೊತೆಗೊಯ್ಯಬೇಕು. ಮಗುವೇ, ಅತ್ಯಾಚಾರದ ಭಯ ಬಿಟ್ಟು ನೀ ಕಲಿ ಎಂದು ಹೇಳುವಷ್ಟು ಶಾಲೆ ಸುರಕ್ಷಿತ ತಾಣವಾಗಬೇಕು. ಹುಟ್ಟು, ಮುಟ್ಟು, ಸಾವು, ಗ್ರಹಬಲ ಮತ್ತಿತರ ವಿಷಯಗಳ ಕುರಿತು ಇರುವ ಮೌಢ್ಯವನ್ನು ಕಾಯ್ದೆ ಬರಲಿ ಎಂದು ಕಾಯದೆ ತೊಲಗಿಸಬೇಕು

ಸಾವಿತ್ರಿ ಬಾಯಿ, ಜ್ಯೋತಿಬಾ ಫುಲೆಯವರು ಹೆಣ್ಣುಮಕ್ಕಳ ತಿಳುವಳಿಕೆ ಸುಧಾರಿಸಬೇಕೆಂದು, ಅದು ಶಿಕ್ಷಣದ ಮೂಲಕ ಸಾಧ್ಯವಾಗಬಹುದೆಂದು ಜೀವಮಾನ ಪರ್ಯಂತ ಹೋರಾಡಿದರು. ಹೆಣ್ಣುಮಕ್ಕಳು ಮತ್ತು ಶೂದ್ರಾತಿಶೂದ್ರರು ಅಕ್ಷರ ಕಲಿಯುವುದೇ ಅಪರಾಧವೆನಿಸಿಕೊಂಡಿದ್ದ ಕಾಲದಲ್ಲಿ ಶಾಲೆ ತೆರೆದು ಓದಲು ಸಹಾಯ ಮಾಡಿದರು. ಅಷ್ಟೇ ಅಲ್ಲ, ಜನರ ಬದುಕಿನಲ್ಲಿ ಬದಲಾಗಬೇಕಾದದ್ದು ಬಹಳಷ್ಟಿದೆಯೆಂದರಿತು ಸಮಾಜ ಸುಧಾರಣಾ ಕ್ರಮಗಳನ್ನು ಜಾರಿಗೆ ತಂದರು. ಸತ್ಯಶೋಧಕ ಸಮಾಜವು ಸರಳವಾದ, ಆಚರಣೆ-ಆಡಂಬರಗಳಿರದ ಮದುವೆಗಳನ್ನು ಚಾಲ್ತಿಗೆ ತಂದಿತು.

ಈಗ ಶಿಕ್ಷಣ ಮೂಲಭೂತ ಹಕ್ಕು; ಯಾರು ಬೇಕಾದರೂ ಶಾಲೆಗೆ ಹೋಗಿ ಅಕ್ಷರ ಕಲಿತು ಬರಬಹುದು. ಆದರೆ ಶಿಕ್ಷಣ ಸಮಾನಾವಕಾಶ ಒದಗಿಸುವಲ್ಲಿ ವಿಫಲವಾಗಿರುವುದೇ ಅಲ್ಲದೆ ವೈಚಾರಿಕತೆ ಬೆಳೆಸುವುದರಲ್ಲೂ ಸೋತಿದೆ. ಶಿಕ್ಷಣವೇ ಎಲ್ಲ ಸಾಮಾಜಿಕ ಅನಿಷ್ಟಗಳಿಗೆ ಮದ್ದಾಗಬಹುದೆಂಬ ನಮ್ಮ ತಿಳುವಳಿಕೆ ಎಲ್ಲೋ ತಪ್ಪಾಗಿದೆ. ಶಿಕ್ಷಿತರೆಲ್ಲ ವಿಚಾರವಂತರಾಗದೆ, ಸಮಾಜಮುಖಿಯಾಗದೇ ಸ್ವಾರ್ಥದ ನಡವಳಿಕೆಯಲ್ಲಿ, ಕಂದಾಚಾರದಲ್ಲಿ ಮುಳುಗಿರುವುದೇ ಹೆಚ್ಚಾಗಿದೆ.

ಏಕೆ ಹೀಗಾಯಿತು? ಸುಧಾರಣೆಗಾಗಿ ನಿರಂತರ ಯತ್ನಿಸಿದ ಅಸಂಖ್ಯ ಚೇತನಗಳ ಪ್ರಯತ್ನದ ಹೊರತಾಗಿಯೂ ಏಕೆ ಕಾಲ ಸರಿದೇ ಇಲ್ಲವೇನೋ ಎನಿಸುವಂತೆ ಸಮಾಜ ನಿಂತಲ್ಲೆ ನಿಂತುಬಿಟ್ಟಿತು? ಇದಕ್ಕೆ ಕಾರಣ ನಾವು ಸಾವಿತ್ರಿಬಾಯಿ, ಜ್ಯೋತಿಬಾ ಫುಲೆ, ಅಂಬೇಡ್ಕರರಂಥ ಹಿರಿಯರು ತಮ್ಮ ಜೀವಿತ ಕಾಲದಲ್ಲಿ ಮಾಡಿದ ಕೆಲಸಗಳನ್ನು ಅವರೆಲ್ಲಿ ಬಿಟ್ಟರೋ ಅಲ್ಲೇ ನಿಲ್ಲಿಸಿರುವುದು.

ಹಾಗಾಗಬಾರದೆಂದರೆ ಫುಲೆಗಳ ಚಿಂತನೆ, ಕಾರ್ಯಗಳ ಚಾರಿತ್ರಿಕ ಮಹತ್ವವನ್ನು ನಾವು ಅರಿಯಬೇಕು. ಅವರ ವಿಚಾರಗಳನ್ನು ಹೆಚ್ಚೆಚ್ಚು ಜನರಿಗೆ ತಲುಪಿಸಿ ಕಾರ್ಯಪ್ರವೃತ್ತರಾಗಬೇಕು. ಶಿಕ್ಷಣವನ್ನು ಸಮಾಜ ಬದಲಾವಣೆಯ ಭಾಗವಾಗಿ ನೋಡುತ್ತ ಅಂದು ಅವರು ಮಾಡಿದ ಕೆಲಸಗಳನ್ನು ಮತ್ತು ಚಿಂತನೆಗಳನ್ನು ಆಳವಾಗಿ ಗ್ರಹಿಸಿ ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ಯುವಜನರತ್ತ ನಮ್ಮ ನಡೆ ಸಾಗಬೇಕು.

ಇವತ್ತು ಭಾರತದ ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲಾ ಹಂತಗಳ ಬೋಧಕ ಸಿಬ್ಬಂದಿಯನ್ನು ಗಮನಿಸಿದರೆ ಅವರಲ್ಲಿ ಮಹಿಳೆಯರೇ ಹೆಚ್ಚು ಕಂಡುಬರುತ್ತಾರೆ. ಅದರಲ್ಲೂ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕಿಯರೇ ಹೆಚ್ಚಿದ್ದಾರೆ. ಮಲಾಲಾ ಎಂಬ ದಿಟ್ಟ ಹುಡುಗಿ ಪಾಕಿಸ್ತಾನದಲ್ಲಿ ಅಕ್ಷರ ಕಲಿಯುವ ಹಕ್ಕಿಗಾಗಿ ನಡೆಸಿದ ಸಾವು ಬದುಕಿನ ಹೋರಾಟದ ಕತೆ ಕೇಳಿ ನಮ್ಮಲ್ಲೆಷ್ಟೋ ಜನ ಸದ್ಯ ನಾವು ಅಂತಹ ಸನ್ನಿವೇಶದಲ್ಲಿಲ್ಲ ಎಂದು ಸಮಾಧಾನದ ನಿಟ್ಟುಸಿರು ಬಿಡಬಹುದು. ಆದರೆ ಇವತ್ತಿನ ಈ ಕಾಲಕ್ಕೆ ಇನ್ನೊಂದು ಮುಖವೂ ಇದೆ ಎನ್ನುವುದನ್ನು ನಾವು ಮರೆಯಬಾರದು.

ಇವತ್ತಿಗೂ ನಮ್ಮ ದೇಶದ ಜನಸಂಖ್ಯೆಯ ಕಾಲುಭಾಗಕ್ಕಿಂತ ಹೆಚ್ಚು ಜನರಿಗೆ ಇನ್ನೂ ಅಕ್ಷರದ ಬೆಳಕು ಸಿಕ್ಕಿಲ್ಲ. ಶಾಲಾಕಾಲೇಜಿಗೆ ಹೋಗಬೇಕಾದ ಮಕ್ಕಳ ಸಂಖ್ಯೆ ಜನಸಂಖ್ಯೆಯ ಶೇ. 30 ಇದೆ. ಅವರಲ್ಲಿ ನಾಲ್ಕೂವರೆ ಕೋಟಿ ಮಕ್ಕಳು ಎಳೆತನದಲ್ಲೇ ದುಡಿಮೆಗಿಳಿಯುತ್ತಿದ್ದಾರೆ. ಪ್ರಾಥಮಿಕ ಶಾಲೆಗೆ ಹೋಗಬೇಕಾದ 20 ಕೋಟಿ ಮಕ್ಕಳಲ್ಲಿ 5 ಕೋಟಿ ಮಕ್ಕಳು ಶಾಲೆ ಮುಖ ಕಾಣದೇ ಉಳಿಯುತ್ತಿದ್ದಾರೆ. ಶಾಲೆಗೆ ಬರದ ಮಕ್ಕಳೇ ಅಪೌಷ್ಟಿಕತೆ ಎದುರಿಸುವ ಮಕ್ಕಳೂ ಆಗಿದ್ದಾರೆ. ಅಂಥವರನ್ನು ಹೇಗಾದರೂ ಶಾಲೆಗೆ ಸೆಳೆಯಲು ಬಿಸಿಯೂಟ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಅದು 1995ರಿಂದಲೇ ಜಾರಿಯಲ್ಲಿದೆ. ಆದರೂ ಕಲಿಯುವ ಅವಕಾಶ ಸಿಕ್ಕಿದ ಎಲ್ಲರಿಗೂ ವಿದ್ಯೆ ಅನ್ನ ನೀಡುವ-ಅರಿವಿನ ಬೆಳಕಾಗುವ ಮಾರ್ಗ ತೋರಿಸುತ್ತಿಲ್ಲ.

ಇವತ್ತಿಗೂ ಹುಡುಗಿಯರು, ಅದರಲ್ಲೂ ಬಡ ಹಳ್ಳಿಗಾಡಿನ ಮಕ್ಕಳು ಮೈಲುಗಟ್ಟಲೆ ನಡೆದು ಶಾಲೆಗೆ ಹೋಗಬೇಕು. ಅಂಥವರೇನಾದರೂ ಹಾಸ್ಟೆಲಿನಲ್ಲಿ ಉಳಿದು ಕಲಿಯಬಯಸಿದರೆ ಹಾಸ್ಟೆಲುಗಳ ಸಂಖ್ಯೆ ಬೆರಳೆಣಿಕೆಯಷ್ಟಿದೆ. ಅಲ್ಲಿನ ಸುರಕ್ಷೆ, ಸೌಲಭ್ಯಗಳು ಹೇಗಿವೆ ಎಂದರೆ ಪಾಲಕರು ತಮ್ಮ ಮಗಳನ್ನು ಮನೆಯಿಂದ ದೂರ ಬಿಡಲು ಹೆದರಬೇಕಾಗಿದೆ.

ಈಗಲೂ ಇವತ್ತೂ ಮೌಢ್ಯಾಚರಣೆಗಳು ಢಾಳಾಗಿವೆ. ಅವೇ ಧಾರ್ಮಿಕ ಆಚರಣೆಗಳೆನಿಸಿಕೊಂಡಿವೆ. ಜಾತಿಪದ್ಧತಿಯು ಎಲ್ಲೆಲ್ಲೋ ತನ್ನ ಪಟ್ಟುಗಳ ಬಿಗಿಗೊಳಿಸುತ್ತಿದೆ. ಶಾಲೆಯೇ ಜಾತೀಯತೆಯ ಒಳಸುಳಿಗಳನ್ನು ಮಕ್ಕಳಿಗೆ ಪರಿಚಯಿಸುವ ತಾಣವಾಗುತ್ತಿದೆ. ಶಾಲಾ ಪಠ್ಯ ಮತ್ತು ಎಳೆಯರಿಗೆ ಬೋಧಿಸುವ ಇತಿಹಾಸವೇ ರಾಜಕೀಯಕರಣಗೊಳ್ಳುತ್ತಿದೆ. ಇಂಗ್ಲಿಷ್ ಎಂಬ ಜಾಗತಿಕ ಸರ್ವಾಧಿಕಾರಿ ಭಾಷೆಯೆದುರು ಸಣ್ಣಪುಟ್ಟ ಭಾಷೆಗಳು ಸೊರಗಿ ಕಣ್ಮುಚ್ಚುತ್ತಿವೆ. ಇಂಗ್ಲಿಷ್ ಬರದ ದೇಶೀ ಭಾಷೆಯ ಜ್ಞಾನಿ ಅನಕ್ಷರಸ್ಥ ಎನಿಸಿಕೊಳ್ಳುತ್ತಿದ್ದಾರೆ. ಮಾರುಕಟ್ಟೆಯೇ ಧರ್ಮವಾಗಿರುವ ಕಾಲದಲ್ಲಿ ಹಣ ಮೌಲ್ಯವಾಗಿದೆ. ಯಂತ್ರಗಳೊಡನೆ ಬದುಕು ನಿಕಟವಾಗುತ್ತ ಹೋದಂತೆ ಮಾನವ ವೇದನೆಗಳು ಸಿಟ್ಟು, ಹೋರಾಟ ಹುಟ್ಟಿಸಲು ವಿಫಲವಾಗುತ್ತಿವೆ. ಧರ್ಮಾಧಾರಿತ ರಾಜಕಾರಣ ತಲೆಯೆತ್ತುತ್ತ ಮಹಿಳೆಯನ್ನು ದ್ವೇಷ ರಾಜಕಾರಣದ ದಾಳವಾಗಿ ಬಳಸಿಕೊಳ್ಳಲಾಗುತ್ತಿದೆ. ಜಾತಿ ವೈಷಮ್ಯದ ಗಲಭೆಗಳಲ್ಲಿ; ಕೋಮುಗಲಭೆಗಳಲ್ಲಿ ಒಂದು ಜಾತಿ/ಕೋಮಿನ ಮಹಿಳೆಯರೂ ಸಕ್ರಿಯವಾಗಿ ಪಾಲ್ಗೊಂಡು ಪುರುಷರಿಗಿಂತ ತಾವೇನು ಕಡಿಮೆಯಿಲ್ಲ ಎಂದು ಹಿಂಸೆ ಮೆರೆದಿದ್ದಾರೆ. ಇದರ ನಡುವೆ ಅವರಿಗೆ ಲಿಂಗನ್ಯಾಯ, ಲಿಂಗ ಸಮಾನತೆ ಎಲ್ಲವೂ ಮರೆತುಹೋದ ಪದಗಳಾಗತೊಡಗಿವೆ.

ಇವತ್ತು ವಿಧವಾ ಪದ್ಧತಿ ಇಲ್ಲ. ಹೆಣ್ಣಿಗೆ ಆಸ್ತಿ ಹಕ್ಕು ದೊರೆತಿದೆ. ಸಮಾನ ನಾಗರಿಕ ಹಕ್ಕುಗಳಿವೆ. ಶಿಕ್ಷಣದಲ್ಲಿ ಹೆಣ್ಣುಮಕ್ಕಳಿಗೆ ವಿಶೇಷ ಸವಲತ್ತುಗಳಿವೆ. ಅಷ್ಟೇ ಅಲ್ಲ, ಉಳಿದ ಕ್ಷೇತ್ರಗಳಲ್ಲಿಯೂ ಮಹಿಳೆಯರ ಭಾಗೀದಾರಿಕೆಯನ್ನು ಉತ್ತೇಜಿಸುವಂತಹ ಹಲವು ಕಾರ್ಯಕ್ರಮಗಳಿವೆ. ಆದರೆ ಬಹುಪಾಲು ಕ್ರಮಗಳು ಕಾಗದದ ಮೇಲೆ ಉಳಿದವೇ ಹೊರತು ಸಮಾಜದ ನರನಾಡಿಗಳಲ್ಲಿ ಹರಿಯಲಿಲ್ಲ. ಎಂದೇ ಹೆಣ್ಣು ಅಬಲೆ ಹೆಣ್ಣಾಗಿಯೇ ಪರಿಗಣಿಸಲ್ಪಟ್ಟಿದ್ದಾಳೆ.

ಇಂಥ ಸಂಕಟಕಾಲದಲ್ಲಿ ಮಕ್ಕಳಲ್ಲಿ ವೈಚಾರಿಕ ಮನೋಭಾವ ಬೆಳೆಸುವ, ಜಾತ್ಯತೀತ ಮೌಲ್ಯ ತುಂಬುವ ಅವಶ್ಯಕತೆಯಿದೆ. ನೆಲದಾಳದಲ್ಲಿ ಇಂದಿಗೂ ಅಲ್ಲಲ್ಲೋ ಅಡಗಿರುವ ಶುದ್ಧಜಲವನ್ನು, ಜಲದ ಕಣ್ಣನ್ನು ಅರಸಬೇಕಿದೆ. ಜಲಸೂಚಿಯ ಕೆಲಸವನ್ನು ಶಿಕ್ಷಕ ಬಂಧುಗಳು ನಿಭಾಯಿಸಬೇಕಾಗಿದೆ. ದಿಕ್ಸೂಚಿಯಾಗಬಲ್ಲ, ಸತ್ಯದರ್ಶಿಯಾಗಬಲ್ಲ ಶಿಕ್ಷಣ ನೀಡುವಂಥ ಅತಿ ಮಹತ್ತರ ಜವಾಬ್ದಾರಿ ಅವರ ಮೇಲಿದೆ.

ದಲಿತ ಮಹಿಳೆ ತಯಾರಿಸಿದ ಬಿಸಿಯೂಟ ಉಣಲೊಲ್ಲೆ ಎನುವ ಮಕ್ಕಳನ್ನು ಮನವೊಲಿಸಿ ಜೊತೆಗೊಯ್ಯಬೇಕು. ಮಗುವೇ, ಅತ್ಯಾಚಾರದ ಭಯ ಬಿಟ್ಟು ನೀ ಕಲಿ ಎಂದು ಹೇಳುವಷ್ಟು ಶಾಲೆ ಸುರಕ್ಷಿತ ತಾಣವಾಗಬೇಕು. ಹುಟ್ಟು, ಮುಟ್ಟು, ಸಾವು, ಗ್ರಹಬಲ ಮತ್ತಿತರ ವಿಷಯಗಳ ಕುರಿತು ಇರುವ ಮೌಢ್ಯವನ್ನು ಕಾಯ್ದೆ ಬರಲಿ ಎಂದು ಕಾಯದೆ ತೊಲಗಿಸಬೇಕು. ನಾವೊಬ್ರು ಪ್ರಯತ್ನ ಮಾಡಿದರೆ ಏನಾದೀತು? ಎಂಬ ಸಿನಿಕತನವನ್ನು ಶಿಕ್ಷಕವರ್ಗವೂ ಸೇರಿದಂತೆ ಎಲ್ಲರೂ ಬಿಡಬೇಕು. ನಮ್ಮ ಆತ್ಮಪ್ರಜ್ಞೆಯನ್ನು ಬಡಿದೆಬ್ಬಿಸುವ ಸಾವಿತ್ರಿಬಾಯಿಯಂತಹ ಶಿಕ್ಷಕಿ, ಜ್ಯೋತಿಬಾರಂತಹ ಹೋರಾಟಗಾರರನ್ನು ನಮ್ಮ ಕಣ್ಣಗೊಂಬೆಯಲ್ಲಿಟ್ಟುಕೊಂಡು ಪ್ರತಿ ಮಗುವಿಗೂ ಅರ್ಹ ಶಿಕ್ಷಣ, ಸಮಾನ ಶಿಕ್ಷಣ ನೀಡಬೇಕೆಂಬ ಪ್ರತಿಜ್ಞೆ ಮಾಡಬೇಕು.

ಖಾಸಗಿ ಶಾಲೆಗಳು ನಿಮ್ಮ ಬಳಿ ಇರುವ ಕಾಸಿಗೆ ತಕ್ಕ ಎಜುಕೇಷನ್ ಅನ್ನು ಮಕ್ಕಳಿಗೆ ಕೊಟ್ಟು ಸೇವೆ ಮಾಡಲು ತುದಿಗಾಲಲ್ಲಿ ನಿಂತಿರುವಾಗ ಸಮಾನ ಶಿಕ್ಷಣದ ಕೂಗೆದ್ದಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ಸಮಾನ ಮನಸ್ಕ ಸಂಗಾತಿಗಳು ದೇಶಾದ್ಯಂತ ಸಮಾನ ಶಿಕ್ಷಣ ಆಂದೋಲನ ಶುರುಮಾಡಿದ್ದಾರೆ. ಕರ್ನಾಟಕದಲ್ಲೂ ಸಂಘಟನೆಗಳು ಸಮಾನ ಶಿಕ್ಷಣಕ್ಕಾಗಿ ಅರ್ಥಪೂರ್ಣ ಹೋರಾಟ ನಡೆಸುತ್ತಿವೆ. ದೇವನೂರ ಮಹಾದೇವರೂ ಸೇರಿದಂತೆ ಹಲವರು ಮಾತೃಭಾಷೆಯಲ್ಲಿ ಶಿಕ್ಷಣ ನೀಡಬೇಕೆಂಬ ಬೇಡಿಕೆಯನ್ನು ಆಂದೋಲನವಾಗಿ ರೂಪಿಸಬೇಕೆಂದು ಪ್ರಯತ್ನಿಸುತ್ತಿದ್ದಾರೆ.

ಈ ಹೊತ್ತಿನಲ್ಲಿ ಸಾವಿತ್ರಿಬಾಯಿ-ಜ್ಯೋತಿಬಾರಂತಹ ಮಹಾನ್ ಚೇತನಗಳನ್ನು ಜಾತಿಧರ್ಮಗಳ, ಊರುಭಾಷೆಗಳ ಚೌಕಟ್ಟಿನಲ್ಲಿ ಗುರುತಿಸದೇ ಎಲ್ಲರೂ ಅವರ ಹೋರಾಟ ಚೈತನ್ಯವನ್ನು, ಮನೋಭೂಮಿಕೆಯನ್ನು ಗ್ರಹಿಸಿ ತಮ್ಮದಾಗಿಸಿಕೊಳ್ಳಲೇಬೇಕು. ಸತ್ಯಶೋಧಕ ಮತ್ತೆ ನಮ್ಮ ನಡುವೆ ತಲೆಯೆತ್ತಬೇಕು.

ಉನ್ನಾಂವ್ ಸಂತ್ರಸ್ತೆಗೂ ತಪ್ಪದ ದೌರ್ಜನ್ಯ!

ಉನ್ನಾವ್ ಸಂತ್ರಸ್ತೆಯ ಹೋರಾಟ ನಮ್ಮೆಲ್ಲರ ಹೋರಾಟ. ''ನ್ಯಾಯಾಂಗದ ಮೇಲೆ ನಂಬಿಕೆ ಇದೆ. ಆದರೆ ನೀವು ನನ್ನ ಜೊತೆ ನಿಲ್ಲಿ'' ಎಂಬ ಆಕೆಯ ಕರೆಗೆ ಪ್ರತಿಕ್ರಿಯಿಸೋಣ. ಏಕೆಂದರೆ, ನಾವು ಒಟ್ಟಾಗಿ ನಿಂತರೆ, ಅಪರಾಧಿಗಳ ಬೆಂಬಲಿಗರು ಸೋಲುತ್ತಾರೆ. ನಮ್ಮ ದೇಶದ ಮಗಳು ಒಂಟಿಯಾಗಿ ಹೋರಾಡದಂತೆ ಮಾಡೋದು ಎಲ್ಲರ ಹೊಣೆಗಾರಿಕೆಯಾಗಬೇಕು.

ನಮ್ಮ ದೇಶದಲ್ಲಿ ನ್ಯಾಯಕ್ಕಾಗಿ ಹೋರಾಡುವುದು ಎಷ್ಟು ಕಷ್ಟ ಇದೆ ಅನ್ನೋದನ್ನ ಹಲವು ಪ್ರಕರಣಗಳು ನಮಗೆ ತೋರಿಸಿಕೊಟ್ಟಿವೆ. ಅತ್ಯಾಚಾರದಂತಹ ಘನಘೋರ ಭಯಾನಕ ದೌರ್ಜನ್ಯದ ಸಂತ್ರಸ್ತೆಯಾಗಿ, ಇಡೀ ಜೀವನವೇ ತಲೆಕೆಳಗಾಗಿದ್ದರೂ, ಕೊನೆಗೆ ಸಾಮಾಜಿಕ ಮಾಧ್ಯಮಗಳಲ್ಲಿ ಅಪಪ್ರಚಾರಕ್ಕೆ ತುತ್ತಾಗುವುದು ಎಷ್ಟು ನಿರ್ದಯ ಅಲ್ವಾ? ಇದು ಇವತ್ತಿನ ಉನ್ನಾಂವ್ ಅತ್ಯಾಚಾರ ಪ್ರಕರಣದ ಸಂತ್ರಸ್ತೆಯ ಸ್ಥಿತಿ. 2017ರಲ್ಲಿ ಉತ್ತರ ಪ್ರದೇಶದ ಉನ್ನಾಂವ್‌ನಲ್ಲಿ ನಡೆದ ಈ ಘಟನೆ ಇಂದಿಗೂ ನ್ಯಾಯಾಂಗದ ಮೇಲೆ ನಂಬಿಕೆಯನ್ನು ಪರೀಕ್ಷಿಸುತ್ತಿದೆ. ಸಂತ್ರಸ್ತೆಯೊಬ್ಬಳು, ತನ್ನ ಕುಟುಂಬದೊಂದಿಗೆ ಒಟ್ಟಾಗಿ ಹೋರಾಡುತ್ತಾ, ಇತ್ತೀಚೆಗೆ ಸಾಮಾಜಿಕ ಮಾಧ್ಯಮಗಳಲ್ಲಿ ಮನವಿ ಮಾಡಿಕೊಂಡಿದ್ದಾರೆ: ''ಜಾತಿ-ಮತಗಳನ್ನು ಬದಿಗಿಟ್ಟು ನನಗೆ ಬೆಂಬಲ ನೀಡಿ. ನಾನೂ ಈ ದೇಶದ ಮಗಳೇ.'' ಈ ಮಾತುಗಳು ಕೇಳಿದರೆ ಹೃದಯ ಕರಗುತ್ತದೆ. ಇದು ನಮ್ಮ ಸಮಾಜದ ನೈತಿಕತೆಯನ್ನು, ನ್ಯಾಯವ್ಯವಸ್ಥೆಯನ್ನು ಪ್ರಶ್ನಿಸುವಂತೆ ಮಾಡಿದೆ.

ಉನ್ನಾವ್ ಪ್ರಕರಣದ ಹಿನ್ನೆಲೆಯನ್ನು ನೆನಪಿಸಿಕೊಳ್ಳೋದಾದರೆ, 2017ರಲ್ಲಿ ಬಿಜೆಪಿಯ ಶಾಸಕನಾಗಿದ್ದ ಕುಲದೀಪ್ ಸಿಂಗ್ ಸೆಂಗರ್ 17 ವರ್ಷದ ಹುಡುಗಿಯನ್ನು ಅತ್ಯಾಚಾರ ಮಾಡಿದ್ದ. ಈ ಸಂತ್ರಸ್ತೆಯೇ ಇಂದು ನ್ಯಾಯಕ್ಕಾಗಿ ಹೋರಾಡುತ್ತಿರುವ ಉನ್ನಾವ್ ಸಂತ್ರಸ್ತೆ. ಪ್ರಕರಣ ರಾಷ್ಟ್ರವ್ಯಾಪಿ ಗಮನ ಸೆಳೆದ ನಂತರ, 2019ರಲ್ಲಿ ದೆಹಲಿ ನ್ಯಾಯಾಲಯ ಸೆಂಗರ್‌ಗೆ ಜೀವಾವಧಿ ಕಠಿಣ ಶಿಕ್ಷೆ ವಿಧಿಸಿತು. ಆದರೆ ನ್ಯಾಯಾಂಗದ ಹಾದಿಯಲ್ಲಿ ತೊಡಕುಗಳು ಮುಂದುವರೆದಿತ್ತು. ಸೆಂಗರ್ ಶಿಕ್ಷೆಯನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದರು. 2025ರ ಡಿಸೆಂಬರ್ 23ರಂದು ದೆಹಲಿ ಹೈಕೋರ್ಟ್ ಶಿಕ್ಷೆಯನ್ನು ಅಮಾನತುಗೊಳಿಸಿ, ಷರತ್ತುಬದ್ಧ ಜಾಮೀನು ಮಂಜೂರು ಮಾಡಿತು. ಇದು ಸಾರ್ವಜನಿಕರ ಕೋಪಕ್ಕೆ ಕಾರಣವಾಯಿತು. ಸಾಮಾನ್ಯ ಜನರಲ್ಲಿ ಆಕ್ರೋಶ ಹುಟ್ಟುವಂತೆ ಮಾಡಿತ್ತು. ''ಅಪರಾಧಿ ಯಾಕೆ ಬಿಡುಗಡೆಯಾಗುತ್ತಾನೆ? ಸಂತ್ರಸ್ತೆಗೆ ನ್ಯಾಯ ಎಲ್ಲಿದೆ?'' ಎಂಬ ಪ್ರಶ್ನೆಗಳು ಹುಟ್ಟಿದ್ದವು. ಆದರೆ ನ್ಯಾಯಾಂಗದ ಮೇಲಿನ ನಂಬಿಕೆಯಿಂದಾಗಿ, ಕೇಂದ್ರೀಯ ತನಿಖಾ ದಳ (ಸಿಬಿಐ) ಮತ್ತು ಇತರರು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದರು. ಕೆಲ ಭಾಗಗಳಲ್ಲಿ ಹೋರಾಟ, ಪ್ರತಿಭಟನೆಗಳು ನಡೆದವು. ಡಿಸೆಂಬರ್ 29ರಂದು ಸುಪ್ರೀಂ ಕೋರ್ಟ್ ಹೈಕೋರ್ಟ್ ಆದೇಶಕ್ಕೆ ತಡೆ ನೀಡಿತು. ಸೆಂಗರ್ ಜೈಲಿನಲ್ಲೇ ಉಳಿಯಬೇಕು ಎಂದು ಸ್ಪಷ್ಟಪಡಿಸಿತು. ಇದು ಸಂತ್ರಸ್ತೆಗೆ ತಾತ್ಕಾಲಿಕ ಸಮಾಧಾನ ಸಿಕ್ಕರೂ, ಹೋರಾಟ ಮುಂದುವರೆಯುತ್ತಿದೆ.

ಆದರೆ ಈ ನಡುವೆ, ಸಂತ್ರಸ್ತೆಯ ಮೇಲೆ ಹೊಸ ದಾಳಿ ಆರಂಭವಾಗಿದೆ. ಸುಪ್ರೀಂ ಕೋರ್ಟ್ ಆದೇಶದ ನಂತರದ ಎರಡು ದಿನಗಳಲ್ಲಿ, ಅಂದರೆ ಕಳೆದ ಕೆಲ ದಿನಗಳಲ್ಲಿ ಸೆಂಗರ್ ಬೆಂಬಲಿಗರು ಸಾಮಾಜಿಕ ಮಾಧ್ಯಮಗಳಲ್ಲಿ ಸಂತ್ರಸ್ತೆಯನ್ನೂ, ಅವರ ಪತಿಯನ್ನೂ ಟಾರ್ಗೆಟ್ ಮಾಡಿ ಅಪಪ್ರಚಾರ ಹಬ್ಬಿಸುತ್ತಿದ್ದಾರೆ. ''ಇವರು ಯಾರು? ಯಾಕೆ ಹೋರಾಡುತ್ತಿದ್ದಾರೆ? ಇವರ ಉದ್ದೇಶ ಏನು?'' ಎಂಬ ಕೊಳಕು ಮಾತುಗಳು, ಫೋಟೋಗಳು, ವೀಡಿಯೋಗಳು ವೈರಲ್ ಆಗುತ್ತಿದೆ. ಇದು ಕೇವಲ ವೈಯಕ್ತಿಕ ದೌರ್ಜನ್ಯ ಮಾತ್ರವಲ್ಲದೇ ಇದು ಅಪರಾಧಿಯನ್ನು ರಕ್ಷಿಸಲು ಸಂತ್ರಸ್ತೆಯನ್ನು ದೌರ್ಬಲ್ಯಗೊಳಿಸುವ ಒಂದು ರಾಜಕೀಯ ಆಟದಂತೆ ಕಾಣಿಸತ್ತೆ. ಸಂತ್ರಸ್ತೆಯೇ ಒಂದು ವೀಡಿಯೋ ಹಂಚಿಕೊಂಡು ಹೇಳಿದ್ದಾರೆ: ''ನನ್ನ ಕುಟುಂಬದ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆ. ದಯವಿಟ್ಟು ನನಗೆ ಬೆಂಬಲ ನೀಡಿ.''ಈ ವೀಡಿಯೋ ನೋಡಿದರೆ ಕಣ್ಣೀರು ಬರುತ್ತದೆ. ಅವರು ಹೇಳುತ್ತಾರೆ ''ನಾನೂ ಕ್ಷತ್ರಿಯ ಸಮುದಾಯದ ಮಗಳೇ. ನಾನೂ ಭಾರತದ ಮಗಳೇ. ದಯವಿಟ್ಟು ನನಗೆ ಧ್ವನಿಯಾಗಿ. ಅಪರಾಧಕ್ಕೆ ಯಾವುದೇ ಜಾತಿಯಿಲ್ಲ'' ಅಂತ ಭಾವುಕ ಮನವಿಯನ್ನು ಮಾಡಿದ್ದಾರೆ.

ಸೆಂಗರ್ ಮಗಳು ಸಾಮಾಜಿಕ ಮಾಧ್ಯಮ ವೇದಿಕೆ ಎಕ್ಸ್ ನಲ್ಲಿ (ಟ್ವಿಟ)ರ್ ತಂದೆಯನ್ನು ''ನಿರಪರಾಧಿ'' ಎಂದು ಕರೆದು ಪೋಸ್ಟ್ ಹಂಚಿಕೊಂಡಿದ್ದಾರೆ. ಇದು ಸಂತ್ರಸ್ತೆಗೆ ಇನ್ನೊಂದು ರೀತಿಯ ಒತ್ತಡವನ್ನ ಸೃಷ್ಟಿಸುತ್ತಿದೆ. ಅಷ್ಟೇ ಅಲ್ಲ ಸೆಂಗರ್ ಪುತ್ರಿ ದೆಹಲಿಯ ಜಂತರ್ ಮಂತರ್‌ನಲ್ಲಿ ಜನವರಿ 11ರಂದು ಕ್ಷತ್ರಿಯ ಸಮಾವೇಶ ನಡೆಸಲು ಕರೆ ನೀಡಿದ್ದಾರೆ ಎಂದು ಹೇಳಿಕೆಗಳೂ ವೈರಲ್ ಆಗುತ್ತಿವೆ. ಅತ್ಯಾಚಾರ ಪ್ರಕರಣವನ್ನ ಜಾತಿ ರಾಜಕಾರಣವನ್ನಾಗಿ ಮಾಡುವ ಕುತಂತ್ರ ಎಂದು ಸಂತ್ರಸ್ತೆ ಆರೋಪಿಸಿದ್ದಾರೆ. ''ತಂದೆಯನ್ನು ಬೆಂಬಲಿಸಲು ಜಾತಿಯನ್ನು ಬಳಸುತ್ತಿದ್ದಾರೆ. ಆದರೆ ಅಪರಾಧಿಯನ್ನು ಬೆಂಬಲಿಸುವ ಬದಲು, ನ್ಯಾಯಕ್ಕಾಗಿ ನಿಲ್ಲಿ'' ಎಂದು ಸಂತ್ರಸ್ತೆ ಕೋರುತ್ತಾರೆ. ಸುಪ್ರೀಂ ಕೋರ್ಟ್ ತಡೆಯೊಡ್ಡಿದ್ದರಿಂದ ಸ್ಥಿತಿ ಸ್ವಲ್ಪ ರಿಲೀಫ್ ಆಗಿದ್ದರೂ, ಸಾಮಾಜಿಕ ಮಾಧ್ಯಮಗಳಲ್ಲಿನ ದೌರ್ಜನ್ಯ ಮುಂದುವರಿದಿದೆ.

ಈ ಎಲ್ಲದರ ನಡುವೆ, ನಮ್ಮ ದೇಶ ಎಲ್ಲಿಗೆ ಬಂದು ನಿಂತಿದೆ ಎಂದು ಯೋಚಿಸಬೇಕಾಗುತ್ತದೆ. ಒಂದು ವೇಳೆ ಸಂತ್ರಸ್ತೆಯೇ ''ನನಗೆ ಸಹಾಯ ಮಾಡಿ, ರಕ್ಷಣೆ ಕೊಡಿ, ಬೆಂಬಲ ಕೊಡಿ'' ಎಂದು ಬೇಡಿಕೊಳ್ಳುವ ಮಟ್ಟಕ್ಕೆ ಬಂದರೆ, ನಾವು ಎಲ್ಲಿ ನಿಂತಿದ್ದೇವೆ? ಅತ್ಯಾಚಾರದಂತಹ ಅಪರಾಧಗಳು ಸಾಮಾನ್ಯವಾಗುತ್ತಿರುವಾಗ, ಅಪರಾಧಿಗಳು ರಾಜಕೀಯ ಅಧಿಕಾರ, ದುಡ್ಡು, ಜಾತಿ-ಮತದ ಬೆಂಬಲದಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಸೆಂಗರ್‌ನಂತಹವರು ಬಿಜೆಪಿ ಉಚ್ಚಾಟಿತರಾಗಿದ್ದರೂ, ಅವರ ಬೆಂಬಲಿಗರು ಇನ್ನೂ ಜಾತಿಯ ಹೆಸರಿನಲ್ಲಿ ರ್‍ಯಾಲಿಗಳನ್ನು ಆಯೋಜಿಸುತ್ತಿದ್ದಾರೆ. ಬಿಜೆಪಿ ಇದೇ ಅತ್ಯಾಚಾರ ಆರೋಪಿ ಸೆಂಗರ್ ಪತ್ನಿಗೆ ತನ್ನ ಪಕ್ಷದ ಕಡೆಯಿಂದ ಟಿಕೆಟ್ ಕೊಟ್ಟು ಗೆಲ್ಲಿಸಿದೆ. ಇದು ವಿಕೃತ ಮನಸ್ಸುಗಳ ಪ್ರದರ್ಶನವಲ್ಲದೇ ಇನ್ನೇನು ಆಗೋಕೆ ಸಾಧ್ಯ? ಇಂತಹವರು ನಮ್ಮ ಸುತ್ತಮುತ್ತಲೇ ಇದ್ದಾರೆ. ಅಧಿಕಾರಿಗಳು, ದುಡ್ಡಿನ ಮದ ನೆತ್ತಿಗೆ ಹತ್ತಿದವರು, ಜಾತಿ-ಮತದ ಅಂಧ ಭಕ್ತರು ಅಪರಾಧಿಗಳನ್ನು ರಕ್ಷಿಸಲು ಸಂತ್ರಸ್ತೆಗೆ ಮಾನಸಿಕ ದೌರ್ಜನ್ಯಕ್ಕೆ ಮುಂದಾಗಿದ್ದಾರೆ.

ಆದರೆ ಇದರಲ್ಲಿ ಒಂದು ಆಶಾಕಿರಣವೂ ಇದೆ. ಸುಪ್ರೀಂ ಕೋರ್ಟ್‌ನ ಆದೇಶವು ಸಂತ್ರಸ್ತೆಗೆ ನ್ಯಾಯಾಂಗದ ಮೇಲಿನ ನಂಬಿಕೆಯನ್ನು ಇನ್ನೂ ಬಲಪಡಿಸಿದೆ. ಅದು ತನ್ನ ಆದೇಶದಲ್ಲಿ ಸ್ಪಷ್ಟಪಡಿಸಿದೆ. ''ಸಂತ್ರಸ್ತೆಗೆ ಕಾನೂನು ಸಹಾಯ ನೀಡಬೇಕು, ಅವರ ಹಕ್ಕುಗಳನ್ನು ರಕ್ಷಿಸಬೇಕು'' ಎಂದಿದೆ. ಇದು ಒಂದು ಸಕಾರಾತ್ಮಕ ಹೆಜ್ಜೆ. ಆದರೆ ನ್ಯಾಯಾಂಗ ಏಕೈಕವಲ್ಲ. ಸಮಾಜವೇ ನ್ಯಾಯದ ಭಾಗವಾಗಬೇಕು. ಸಂತ್ರಸ್ತೆಯ ಮನವಿಯಂತೆ, ನಾವು ಜಾತಿ-ಮತಗಳನ್ನು ಮೀರಿ ನಿಲ್ಲಬೇಕು. ಅಪರಾಧಕ್ಕೆ ಜಾತಿ ಇಲ್ಲ, ಮತ ಇಲ್ಲ.

ನಾವು ಸಾಮಾಜಿಕ ಮಾಧ್ಯಮಗಳಲ್ಲಿ ಧ್ವನಿ ಎತ್ತಬೇಕು, ಅಪಪ್ರಚಾರವನ್ನು ವಿರೋಧಿಸಬೇಕು, ಸಂತ್ರಸ್ತೆಯ ಹೋರಾಟಕ್ಕೆ ಒಗ್ಗೂಡಬೇಕು. ಉನ್ನಾವ್ ಸಂತ್ರಸ್ತೆಯ ಹೋರಾಟ ನಮ್ಮೆಲ್ಲರ ಹೋರಾಟ. ಅವರು ಹೇಳಿದಂತೆ, ''ನ್ಯಾಯಾಂಗದ ಮೇಲೆ ನಂಬಿಕೆ ಇದೆ. ಆದರೆ ನೀವು ನನ್ನ ಜೊತೆ ನಿಲ್ಲಿ.'' ಈ ಕರೆಗೆ ಪ್ರತಿಕ್ರಿಯಿಸೋಣ. ಏಕೆಂದರೆ, ನಾವು ಒಟ್ಟಾಗಿ ನಿಂತರೆ, ಅಪರಾಧಿಗಳ ಬೆಂಬಲಿಗರು ಸೋಲುತ್ತಾರೆ. ನಮ್ಮ ದೇಶದ ಮಗಳು ಒಂಟಿಯಾಗಿ ಹೋರಾಡದಂತೆ ಮಾಡೋಣ. ಇದು ನಮ್ಮ ಸಮ ಸಮಾಜದ, ನಮ್ಮ ನ್ಯಾಯವ್ಯವಸ್ಥೆಯ ಭವಿಷ್ಯಕ್ಕಾಗಿ ಮಾಡಬೇಕಾದ ಕೆಲಸ. ಇಲ್ಲದಿದ್ದರೆ, ಇನ್ನೊಂದು ಉನ್ನಾಂವ್ ಹುಟ್ಟಿಕೊಳ್ಳುತ್ತದೆ. ನಾವು ಅದನ್ನು ಬೆಂಬಲದಿಂದ, ಧ್ವನಿಯಿಂದ, ನ್ಯಾಯದಿಂದ ತಡೆಯೋಣ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR